ಜೀ. ಶಂ. ಪರಮಶಿವಯ್ಯ

ಚೆಲುವರಾಜು

ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಡಾ. ಜೀ. ಶಂ. ಪರಮಶಿವಯ್ಯ

ಚೆಲುವರಾಜು

ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ.

Dr. Jee.Sham.Paramashiviah : By Cheluvaraj, Published by Dr. A.V. Navada, Director Prasaranga, Kannada University, Hampi, Vidyaranya, Kamalapura 583 231 Pp : VIII + ೩೫

First Edition : 1996

ನಮ್ಮವರು ಪುಸ್ತಕಮಾಲೆ - ೧೮

ಪ್ರಕಾಶಕರು :

ಡಾ. ಎ. ವಿ. ನಾವಡ
ನಿರ್ದೇಶಕರು
ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ, ಕಮಲಾಪುರ - ೫೮೩ ೨೩೧

ಬೆಲೆ : ಹನ್ನೆರಡು ರೂಪಾಯಿಗಳು

ಛಾಯಾಕ್ಷರ ಜೋಡಣೆ :

ವರ್ಷಿಣಿ ಗ್ರಾಫಿಕ್ಸ್, ಬೆಂಗಳೂರು - ೪೦ ✆ : ೩೪೦೨೫೭೫

ಮುದ್ರಕರು :

ಸ್ನೇಹಾ ಪ್ರಿಂಟರ್ಸ್
೨೨, ೨ನೇ ಮೈನ್, ಅತ್ತಿಗುಪ್ಪೆ,
ವಿಜಯನಗರ ೨ನೇ ಹಂತ
ಬೆಂಗಳೂರು - ೫೬೦ ೦೪೦

ನಿವೇದನೆ

ಹಂಪಿಯ ಕನ್ನಡ ವಿಶ್ವವಿದ್ಯಾಲಯ ವಿದ್ಯೆಯನ್ನು ಕಲಿಯಲು ಅನುವು ಮಾಡಿಕೊಡುವ ಒಂದು ಸಂಸ್ಥೆಯೇ ಹೊರತು, ಅದು ವಿದ್ಯೆಯನ್ನು ಕಲಿಸುವ ಸಂಸ್ಥೆಯಲ್ಲ. ಒಂದು ದೃಷ್ಟಿಯಿಂದ ಇದು ವಿದ್ಯೆಯನ್ನು ನಿರ್ಮಿಸುವ ಸಂಸ್ಥೆಯಾಗಿದೆ. ನಮ್ಮ ದೇಶದಲ್ಲಿ ಹಳೆಯ ಕಾಲದ ತಿಳುವಳಿಕೆಯೊಂದಿದೆ, ಅಲ್ಲದೇ ಪಶ್ಚಿಮದಿಂದ ಹರಿದು ಬರುತ್ತಿರುವ ಜ್ಞಾನಪ್ರವಾಹವೂ ಇದೆ. ಈ ಎರಡೂ ತಿಳುವಳಿಕೆಗಳು ಒಂದಕ್ಕೊಂದು ಸಂಧಿಸಿ, ಬೆಳಕನ್ನು ಉಂಟು ಮಾಡಿವೆ, ಜೊತೆಗೆ ದಿಗ್ಭ್ರಮೆಯನ್ನೂ ತಂದಿವೆ. ಈ ತಿಳುವಳಿಕೆಗಳ ವಿವೇಕದ ವಿನಿಯೋಗ ಇಂದು ಅಗತ್ಯವಾಗಿದೆ. ಇಂಥ ವಿನಿಯೋಗಕ್ಕಾಗಿ ಹೊಸ ಬಗೆಯ ಶಾಸ್ತ್ರ ವಿಧಾನಗಳು ನಮಗಿಂದು ಬೇಕಾಗಿವೆ. ಕನ್ನಡ ವಿಶ್ವವಿದ್ಯಾಲಯದಲ್ಲಿ ನಡೆಯುತ್ತಿರುವ ಸಂಶೋಧನೆಯ ಗುರಿಯೆಂದರೆ ಈ ಶಾಸ್ತ್ರವಿಧಾನಗಳ ನಿರ್ಮಾಣ. ಈ ಬಗೆಯ ಶಾಸ್ತ್ರ-ಕಲೆ, ಅಭಿಜಾತ- ಜಾನಪದ, ಮಾರ್ಗ-ದೇಸಿ, ಸ್ವಕೀಯ- ಪರಕೀಯ, ಪೌರ್ವಾತ್ಯ-ಪಾಶ್ಚಾತ್ಯ ಈ ಬಗೆಯ ದ್ವಂದ್ವಗಳ ಸಾಮರಸ್ಯ ಮತ್ತು ಸಂಘರ್ಷಗಳ ಒಡಲಿನಲ್ಲಿ ಹುಟ್ಟಿಬರುವ ತಿಳುವಳಿಕೆಯನ್ನು ಹಿಡಿದುಕೊಂಡು ಕನ್ನಡದಲ್ಲಿ ಅದಕ್ಕೆ ಅಭಿವ್ಯಕ್ತಿಯನ್ನು ಕೊಡಬೇಕಾಗಿದೆ. ಭಾಷೆಯಲ್ಲಿ ಮೂಡಿ ಬರುವ ತಿಳುವಳಿಕೆ ಮಾತ್ರ ಉಪಯುಕ್ತವಾಗಬಲ್ಲದು. ಅನುವಾದ, ಭಾಷಾಂತರ, ವಿವರಣೆ, ಟೀಕೆ, ವಿಮರ್ಶೆ ಇಂಥ ವಿಧಾನಗಳನ್ನು ಅನುಸರಿಸುತ್ತ ತಿಳುವಳಿಕೆಯ ಹೊಸ ಸಾಹಿತ್ಯ ನಿರ್ಮಾಣವಾಗಬೇಕು. ಅಂಥ ಎಲ್ಲ ಬಗೆಯ ಸಂಶೋಧನಕ್ಕೂ ಕನ್ನಡ ವಿಶ್ವವಿದ್ಯಾಲಯದಲ್ಲಿ ಅನುಕೂಲವಿದೆ, ಅವಕಾಶವೂ ಇದೆ.

ಹೀಗೆ ಮೂಡಿ ಬಂದ ಸಾಹಿತ್ಯ ಪ್ರಕಟವಾಗಬೇಕು. ನಮ್ಮ ವಿಶ್ವವಿದ್ಯಾಲಯದ ಪ್ರಸಾರಾಂಗಕ್ಕೆ ಇಂಥ ಗುರುತರವಾದ ಜವಾಬ್ದಾರಿಯಿದೆ. ವಿದ್ಯೆಯ ಸೃಷ್ಟಿಯಾಗುವುದು ಈ ಪ್ರಸಾರಾಂಗದಲ್ಲಿ. ನಾಡಿನ ತಜ್ಞರಿಂದ ಗ್ರಂಥಗಳನ್ನು ಬರೆಯಿಸಿ ಪ್ರಕಟಿಸುವುದರ ಜೊತೆಗೆ, ವಿಶ್ವವಿದ್ಯಾಲಯ ಸೃಷ್ಟಿಸುತ್ತಿರುವ ಸಾಹಿತ್ಯವನ್ನೂ ಅದು ಪ್ರಕಟಿಸಬೇಕು. ಇದು ತಿಳುವಳಿಕೆಗೆ ಪರಿಪ್ರೇಕ್ಷ್ಯವನ್ನು ಕಟ್ಟುವ ಕೆಲಸ. ನಾಡಿನ ಪ್ರಕೃತಿಯಂತೆ ನಾಡಿನ ಸಂಸ್ಕೃತಿ ಕೂಡ ಈ ಪರಿಪ್ರೇಕ್ಷ್ಯವಿಲ್ಲದೆ ತನ್ನ ಅರ್ಥವನ್ನು ಕಳೆದುಕೊಳ್ಳುತ್ತಿದೆ. ಕಲ್ಲಿನಲ್ಲಿರುವ ಶಾಸನಗಳನ್ನು ಕಣ್ಣೆತ್ತಿ ನೋಡದ ಜನ ಅದೇ ಪುಸ್ತಕದಲ್ಲಿ ಪ್ರಕಟಗೊಂಡರೆ ಓದುತ್ತಾರೆ,

ಅರ್ಥ ಮಾಡಿಕೊಳ್ಳುತ್ತಾರೆ. ಜನರಾಡುವ ಶಬ್ದಗಳನ್ನೇ ಕೋಶದಲ್ಲಿ ಸಂಗ್ರಹಿಸಿದರೆ ಆ ಶಬ್ದಗಳಿಗೆ ತಿಳುವಳಿಕೆಯ ಬೆಲೆ ಬರುತ್ತದೆ.

ನಮ್ಮ ಪ್ರಸಾರಾಂಗ, ಈಗಾಗಲೇ ಮಹತ್ವದ ಪುಸ್ತಕಗಳನ್ನು ಪ್ರಕಟಿಸಿದೆ. ಪ್ರಸಾರಾಂಗ, ತನ್ನ ಪ್ರಕಟಣೆಗಳ ಮೂಲಕ ಸಾರ್ಥಕವಾಗಬೇಕಾದ ದಾರಿಯನ್ನು ಹುಡುಕಿಕೊಳ್ಳುತ್ತಿದೆ. ಲೋಕದಲ್ಲಿಯ ತಿಳುವಳಿಕೆಯನ್ನು ಸಂಗ್ರಹಿಸಿ ತಿರುಗಿ ಲೋಕಕ್ಕೇ ದಾನ ಮಾಡುವ ಪ್ರಕ್ರಿಯೆ ಪ್ರಸಾರಾಂಗದಲ್ಲಿ ನಡೆಯುತ್ತಿದೆ. ಸಂಗ್ರಹವಾದ ತಿಳುವಳಿಕೆಗೆ ಗ್ರಂಥಗಳ ರೂಪವನ್ನು ಕೊಡುವ ಹೊಣೆಗಾರಿಕೆ ಪ್ರಸಾರಾಂಗದ್ದಾಗಿದೆ. ಈ ರೂಪಾಂತರದ ಪ್ರಕ್ರಿಯೆ ನಮ್ಮ ವಿಶ್ವವಿದ್ಯಾಲಯದ ವೈಶಿಷ್ಟ್ಯವಾಗಿದೆ.

ನಾವು ನಮ್ಮ ನಮ್ಮಲ್ಲಿ ವಿಚಾರ ವಿನಿಮಯ ನಡೆಯಲು, ಒಬ್ಬರ ಅರಿವನ್ನು ಎಲ್ಲರೂ ಹಂಚಿಕೊಳ್ಳಲು, ವಿಶ್ವವಿದ್ಯಾಲಯದಲ್ಲಿ ಪ್ರತಿವಾರ ಮಂಟಪವೆಂಬ ಕಾರ್ಯಕ್ರಮ ನಡೆಸುತ್ತೇವೆ. ಅಲ್ಲಿ ಹೊಮ್ಮಿದ ವಿಚಾರಗಳು ನಮ್ಮ ಅರಿವನ್ನು ಹೆಚ್ಚಿಸಿದಂತೆ ನಿಮಗೂ ಲಾಭದಾಯಕವಾಗುವವೆಂಬ ನಂಬಿಕೆಯಿಂದ ಕಿರು ಪುಸ್ತಿಕೆಗಳ ರೂಪದಲ್ಲಿ ನಿಮ್ಮ ಕೈಗಿಡುತ್ತಿದ್ದೇವೆ.

ಚಂದ್ರಶೇಖರ ಕಂಬಾರ
ಕುಲಪತಿಗಳು

ಪರಿವಿಡಿ

ಡಾ. ಜೀ. ಶಂ. ಪರಮಶಿವಯ್ಯ

ಜೀವನ ಮತ್ತು ಸಾಧನೆ

ಜೀಶಂಪ ಎಂಬ ಸಂಕ್ಷಿಪ್ತ ನಾಮದಿಂದಲೇ ಚಿರಪರಿಚಿತರಾದ ಜೀರಹಳ್ಳಿ ಶಂಕರೇಗೌಡ ಪರಮಶಿವಯ್ಯನವರು ಮಂಡ್ಯ ಜಿಲ್ಲೆಯ ನಾಗಮಂಗಲ ತಾಲೋಕಿನ ಅಂಬಲ ಜೀರಹಳ್ಳಿಯಲ್ಲಿ ೧೯೩೩ ನವೆಂಬರ್ ೧೨ರಂದು ಜನಿಸಿದರು. ತಂದೆ ಶಂಕರೇಗೌಡ ಸೌಮ್ಯ ಸ್ವಭಾವದವರು. ತಾಯಿ ರಂಗಮ್ಮ. ಇವರದು ಹೋಬಳಿದಾರರ ಮನೆತನ. ಇವರು ಊರಿನ ಮುಖಂಡರಾಗಿದ್ದು, ಜನರು ಇವರ ಮಾತಿನಂತೆಯೇ ನಡೆದುಕೊಳ್ಳುತ್ತಿದ್ದರು. ಇವರಿಗೆ ಎಲ್ಲರೂ ಗೌರವ ತೋರುತ್ತಿದ್ದರು.

ಜೀಶಂಪ ಅವರ ವಿದ್ಯಾಭ್ಯಾಸ ಪ್ರಾರಂಭವಾದದ್ದು ಹಳ್ಳಿಯ ಕೂಲಿ ಮಠದಲ್ಲಿ. ಸಣ್ಣ ನಂಜುಂಡಯ್ಯ ಇವರ ಗುರುಗಳು. ಗುರುಗಳ ಸೇವೆ ಮಾಡಿಕೊಂಡೇ ಅಕ್ಷರ ಕಲಿತರು. ಕೆಲಕಾಲ ಬೆಳ್ಳೂರು, ಲಕ್ಷ್ಮೀಪುರಗಳಲ್ಲಿ ಅವರ ವಿದ್ಯಾಭ್ಯಾಸ ಮುಂದುವರೆಯಿತು. ಜೀಶಂಪ ಅವರ ಭಾವನವರಾದ ಚಿಕ್ಕನಾಯಕರು ಮೈಸೂರಿನಲ್ಲಿ ಸೈನ್ಯದ ಅಧಿಕಾರಿ. ಜೀಶಂಪ ಅವರು ಇವರ ಮನೆಗೆ ಬಂದು ತಮ್ಮ ವಿದ್ಯಾಭ್ಯಾಸವನ್ನು ಮುಂದುವರೆಸಿದರು. ಮೈಸೂರಿನಲ್ಲಿ ಸೇಂಟ್ ಫಿಲೋಮಿನ ಶಾಲೆಗೆ ಸೇರಿದರು. ನಂತರ ೧೯೪೬ರಲ್ಲಿ ಭಾವನವರಿಗೆ ಬೆಂಗಳೂರಿಗೆ ವರ್ಗವಾಯಿತು. ಅವರೊಂದಿಗೆ ಜೀಶಂಪ ಕೂಡ ಬೆಂಗಳೂರಿಗೆ ತೆರಳಿದರು. ಅಲ್ಲಿ ಅವರು ಸೇರಿದ್ದು ಸಲಾರ್ ಮಿಡ್ಲ್ ಸ್ಕೂಲನ್ನು. ಜೀಶಂಪ ಅವರ ನೆರೆಮನೆಯವರು ಕನ್ನಡದ ಸುಪ್ರಸಿದ್ಧ ಕವಿ ಪುತಿನ. ಇದೊಂದು ದೈವಯೋಗ. ಜೀಶಂಪ ಶಾಲೆಯಲ್ಲಿರುವಾಗ 'ಭೀಷ್ಮ ವಿಜಯ' ಎಂಬ ನಾಟಕ ಬರೆದರು. ಶಾಲೆಯ ವಾರ್ಷಿಕೋತ್ಸವದಲ್ಲಿ ಅವರ ಈ ನಾಟಕವನ್ನು ಮೆಚ್ಚಿಕೊಂಡ ಪು.ತಿ.ನ, ಹುಡುಗನ ಬೆನ್ನುತಟ್ಟಿ "ಮುಂದೆ ಹೀಗೆಯೇ ಬರೆದು ದೊಡ್ಡ ಸಾಹಿತಿಯಾಗು" ಎಂದು ಆಶೀರ್ವದಿಸಿದರು. ಅವರು ಜೀಶಂಪರ ಬಗೆಗೆ ಹೀಗೆ ಅಭಿಪ್ರಾಯ ಪಡುತ್ತಾರೆ. "ಅವರ ಭಾವಂದಿರು ಹೆಬ್ಬಾಳದ ಸೈನಿಕ ಮನೆಸಾಲಿನಲ್ಲಿ ವಾಸವಾಗಿದ್ದರು. ನಾನು ಅವರ ಪಕ್ಕದ ಮನೆಯಲ್ಲಿ ವಾಸವಾಗಿದ್ದೆ. ನಮ್ಮ ಮನೆಗೂ ಅವರ ಮನೆಗೂ ಸ್ನೇಹ ಬೆಳೆಯಿತು. ಅವರು ಬಹಳ ಒಳ್ಳೆಯ ಜನ. ಪರಮಶಿವಯ್ಯ ಒಳ್ಳೆ ಎತ್ತರದ ಚೆಲುವಾದ ಹುಡುಗ. ಆಗಲೇ ಸಾಹಿತ್ಯದಲ್ಲಿ ಆಸಕ್ತಿ ಕವಿತೆ ರಚನೆಯಲ್ಲೂ ಕೈಯಾಡಿಸುತ್ತಿದ್ದರು. ನಾವಿಬ್ಬರೂ

ಸಂಜೆ ಕಾಲಾಡಿಸಲು ಹೋಗುತ್ತಿದ್ದುದೂ, ಉಂಟು. ಚಿಕ್ಕವಯಸ್ಸಿನಲ್ಲೇ ಒಂದು ಮನೋಜ್ಞವಾದ ಕಥನ ಕವನವನ್ನು ನನಗೆ ಓದಲು ಕೊಟ್ಟರು. ಅದರ ಪರಿಷ್ಕರಣಕ್ಕೆ ಹಲವು ಸಲಹೆಗಳನ್ನು ಕೊಟ್ಟೆ. ಆದರೆ ಅವರು ಅದನ್ನು ಅಷ್ಟಾಗಿ ಬೆಳೆಸಿಕೊಂಡಂತೆ ಕಾಣಲಿಲ್ಲ. ಅವರ ಪರಿಶ್ರಮಕ್ಕೆ ಕಾದಿದ್ದ ಕ್ಷೇತ್ರ ಜಾನಪದ" ಎಂದು ಅಭಿಪ್ರಾಯಪಡುತ್ತಾರೆ. ಹೀಗೆ ಉತ್ತಮ ಸಾಹಿತಿಗಳ ನೆರಳಲ್ಲಿ ಬೆಳವಣಿಗೆ ಹೊಂದಿದ ಜೀಶಂಪ, ಕೆಲಕಾಲಾನಂತರ ಕವನ ರಚಿಸತೊಡಗಿದರು. 'ತಾಯಿನಾಡು' ಪತ್ರಿಕೆಯಲ್ಲಿ ಪ್ರತಿ ವಾರವೂ ಅವರ ಕವನಗಳು ಪ್ರಕಟವಾದವು. ತಾವು ಬರೆದ ಕಥೆ, ಕವನಗಳನ್ನು ಬಿಡುವಿನ ವೇಳೆಯಲ್ಲಿ ಸಹಪಾಠಿಗಳ ಮುಂದೆ ವಾಚಿಸುತ್ತಿದ್ದರು. ಬಾಲ್ಯದಿಂದಲೂ ಇವರು ಸಂಘಜೀವಿ. ಇವರು ಎಂದೂ ಒಂಟಿತನದ ಬದುಕು ಇಷ್ಟಪಟ್ಟವರಲ್ಲ. ಅವರ ಸುತ್ತ ಯಾವಾಗಲೂ, ಗೆಳೆಯರ ಗುಂಪೇ ಇರುತ್ತದೆ. ಶಾಲೆಯಲ್ಲಿರುವಾಗ ಇವರು 'ಭೀಮಪ್ಪನ ಬೇಟೆ' ಎಂಬ ನಾಟಕವನ್ನು ಬರೆದರು. ಜೀಶಂಪ ಅವರು ಪುನಃ ಮೈಸೂರಿಗೆ ಬಂದು ಸೆಂಟ್ ಫಿಲೋಮಿನ ಹೈಸ್ಕೂಲ್ ಸೇರಿದರು. ಅನಂತರ ಎಸ್.ಎಸ್. ಎಲ್.ಸಿ.ಯನ್ನು ಮೊದಲನೆಯ ವರ್ಗದಲ್ಲಿ ಪಾಸು ಮಾಡಿದರು. ಅನಂತರ ಅವರ ಓದು ಮುಂದುವರೆದದ್ದು ಮೈಸೂರಿನ ಪ್ರಥಮದರ್ಜೆ ಕಾಲೇಜಿನಲ್ಲಿ. ಇದು ಇಂದಿನ ಯುವರಾಜ ಕಾಲೇಜು. ಕಾಲೇಜಿನ ಸಾಹಿತ್ಯಿಕ ಮತ್ತು ಪಠ್ಯೇತರ ಚಟುವಟಿಕೆಗಳಲ್ಲಿ ಇವರದೇ ಸಿಂಹಪಾಲು. ಆ ಕಾಲಕ್ಕೆ ಇವರು ಗೆಳೆಯರೊಡಗೂಡಿ 'ತಾವರೆ' 'ಕಲಾಕ್ಷೇತ್ರ'- ಮುಂತಾದ ಸಾಂಸ್ಕತಿಕ ಸಂಘಗಳನ್ನು ಆರಂಭಿಸಿ ಅಲ್ಲಿಂದ ಕೈಬರಹದ ಪತ್ರಿಕೆ ಹೊರಡಿಸುತ್ತಿದ್ದರು. ಕತೆ, ಕವಿತೆಗಳ ಸಣ್ಣಪುಟ್ಟ ಪುಸ್ತಕಗಳನ್ನು ಬರೆದು ಪ್ರಕಟಿಸುತ್ತಿದ್ದರು. ಅವೆಲ್ಲ ಈಗ ಪರಮಶಿವಯ್ಯನವರಿಗೆ ತಾರುಣ್ಯದ ಹುಚ್ಚಾಟವಾಗಿ ತೋರಬಹುದು. ಆದರೆ ಅಂತಹ ಪ್ರಯತ್ನಗಳಿಂದಲೇ ಮುಂದೆ ಅವರಲ್ಲಿ ಸಾಹಿತ್ಯಾಭಿರುಚಿ, ಸಾಹಿತ್ಯ ಶಕ್ತಿಗಳು ಬೆಳೆದು ಬಲಗೊಳ್ಳುವುದು ಸಾಧ್ಯವಾಯಿತೆನ್ನುವುದು ವಿದಿತವೇ ಇದೆ. ಇವರು ತಮ್ಮ ಹೈಸ್ಕೂಲು ಜೀವನದಲ್ಲೇ ಒಂದು ಪುಸ್ತಕ ಬರೆದರು. ಅದರ ಹೆಸರು 'ದಿಬ್ಬದಾಚೆ'. ಇದು ಜೀಶಂಪರ ಮೊದಲ ಪುಸ್ತಕ.

ಮೈಸೂರು ವಿಶ್ವವಿದ್ಯಾಲಯದಿಂದ ಪ್ರಕಟವಾಗುತ್ತಿರುವ 'ಪ್ರಬುದ್ಧ ಕರ್ಣಾಟಕ' ಒಂದು ಸಾಹಿತ್ಯಿಕ ಪತ್ರಿಕೆ. ಜೀಶಂಪ ಅವರ ಅನೇಕ ಕತೆ, ಕವನ, ಪ್ರಬಂಧಗಳು ಇಲ್ಲಿ ಬೆಳಕುಕಂಡಿವೆ. ೧೯೪೫ರಲ್ಲಿ ಇವರ 'ಜೀವನಗೀತ' ಎಂಬ ಕವನ ಸಂಕಲನ ಪ್ರಕಟವಾಯಿತು. ಇವರು ಒಬ್ಬ ಉತ್ತಮ ಕವಿಯೆಂಬುದು ಇದರಿಂದ ಸಾಬೀತಾಯಿತು. ನಂತರ ಕೆಲಕಾಲ ಕೆಲಸ ಹುಡುಕಿಕೊಂಡು ಬೆಂಗಳೂರಿಗೆ ಹೊರಟರು. ಅಲ್ಲಿ 'ಮಲೆನಾಡು' ಪತ್ರಿಕೆಯಲ್ಲಿ ಸ್ವಲ್ಪಕಾಲ ಕೆಲಸಮಾಡಿ ನಂತರ ಗುಮಾಸ್ತರಾಗಿ ವ್ಯವಸಾಯ ಇಲಾಖೆ ಸೇರಿದರು. ಅನಂತರ ೧೯೫೫ರಲ್ಲಿ ಕನಕಪುರದ ಗ್ರಾಮಾಂತರ ವಿದ್ಯಾಸಂಸ್ಥೆಯೊಂದರಲ್ಲಿ ಉಪಾಧ್ಯಾಯರಾಗಿ ಸೇವೆಗೆ ಸೇರಿದರು. ೧೯೫೬ರಲ್ಲಿ 'ಕಾವಲುಗಾರ ಮತ್ತು ಇತರ ಕಥೆಗಳು' ಎಂಬ ಕಥಾ ಸಂಕಲನವನ್ನು ಪ್ರಕಟಿಸಿದರು. ಅಲ್ಲಿಯ ಕರ್ನಾಟಕ ಸಂಘದ

ಮೂಲಕ ಹಲವು ಕಾರ್ಯಕ್ರಮಗಳನ್ನು ನಡೆಸಿದರು. ಇಲ್ಲಿಗೆ ಇವರ ವಿದ್ಯಾಭ್ಯಾಸ ನಿಂತು ನಾಲ್ಕೈದು ವರ್ಷಗಳಾಗಿದ್ದವು. ಕನಕಪುರದ ವಿದ್ಯಾಸಂಸ್ಥೆಯ ಸಮಾರಂಭವೊಂದಕ್ಕೆ ರಾಷ್ಟ್ರಕವಿ ಕುವೆಂಪು ಹಾಗೂ ಪ್ರೊ. ದೇ. ಜವರೇಗೌಡ ಅವರು ಬಂದಿದ್ದರು. ಇವರ ಪ್ರತಿಭೆಯನ್ನು ಗುರುತಿಸಿ ವಿದ್ಯಾಭ್ಯಾಸವನ್ನು ಮುಂದುವರಿಸುವಂತೆ ಹೇಳಿದರು. ಅವರ ಸಲಹೆಯಂತೆ ಜೀಶಂಪ ಅವರು ವಿದ್ಯಾಭ್ಯಾಸವನ್ನು ಮುಂದುವರೆಸಿದರು. ಇವರ ಸಾಹಿತ್ಯ ಚಟುವಟಿಕೆಗೆ ಉತ್ತಮ ಅವಕಾಶ ದೊರೆತದ್ದು ಮೈಸೂರಿನಲ್ಲಿ. ೧೯೬೦ರಲ್ಲಿ 'ಮಬ್ಬು ಜಾರಿದ ಕಣಿವೆ'ಯಲ್ಲಿ ಎಂಬ ಕಥಾ ಸಂಕಲನ ಪ್ರಕಟಿಸಿದರು. ಈ ವೇಳೆಗೆ ಇವರ ಎಂ.ಎ. ಅಧ್ಯಯನ ಮುಗಿದಿತ್ತು. ಆದರೆ ಪರೀಕ್ಷೆಗೆ ಕುಳಿತುಕೊಳ್ಳಲು ಸಾಧ್ಯವಾಗಲಿಲ್ಲ. ಹೀಗಾಗಿ ಮೂರುವರ್ಷ ಅವರ ವ್ಯಾಸಂಗಕ್ಕೆ ತೆರೆಬಿದ್ದಿತು. ಮತ್ತೆ ಕೆಲಸ ಹುಡುಕಿಕೊಂಡು ಬೆಂಗಳೂರಿಗೆ ತೆರಳಿದರು. ಅಲ್ಲಿ ಬೆಂಗಳೂರು ಮಹಾನಗರಸಭೆಯ ಪ್ರೌಢಶಾಲೆಯಲ್ಲಿ ಉಪಾಧ್ಯಾಯರಾಗಿ ಸೇರಿದರು. ೧೯೬೩ರಲ್ಲಿ ಎಂ.ಎ.ಮುಗಿಸಿ, ೧೯೬೪ರಲ್ಲಿ ಮೈಸೂರಿನ ಶ್ರೀ ಶಿವರಾತ್ರೀಶ್ವರ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾಗಿ ಕೆಲಸಕ್ಕೆ ಸೇರಿದರು. ಕಾಲೇಜಿನಲ್ಲಿದ್ದಾಗಲೂ ಇವರು ಪಾಠದೊಂದಿಗೆ ತಮ್ಮ ಸಾಹಿತ್ಯಕ ಚಟುವಟಿಕೆಗಳನ್ನು ಮುಂದುವರೆಸಿದರು. 'ಪ್ರಸಾದ' ಎಂಬ ಸಾಹಿತ್ಯ ಪತ್ರಿಕೆ ಆರಂಭಿಸಿದರು. ೧೯೬೮ರಲ್ಲಿ ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಜಾನಪದ ಅಧ್ಯಾಪಕರಾಗಿ ಸೇರಿದರು. ಈ ವೇಳೆಗಾಗಲೇ ಜಾನಪದ ಕ್ಷೇತ್ರದಲ್ಲಿ ಅದ್ವಿತೀಯವಾದ ಸಾಧನೆಯನ್ನು ಮಾಡಿದ್ದ ಜೀಶಂಪ ಅವರ ಜಾನಪದ ವಿದ್ವತ್ತನ್ನು ಗುರುತಿಸಿದ ಅಂದಿನ ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕ ಪ್ರೊ.ದೇಜಗೌ ಅವರು ಇವರನ್ನು ವಿಶ್ವವಿದ್ಯಾಲಯಕ್ಕೆ ಆಹ್ವಾನಿಸಿ ಜಾನಪದ ವಿಭಾಗ ಮತ್ತು ಜಾನಪದ ವಸ್ತು ಸಂಗ್ರಹಾಲಯದ ನಿರ್ಮಾಣದ ಜವಾಬ್ದಾರಿಯನ್ನು ವಹಿಸಿದರು. ಹೀಗೆ ತಮ್ಮ ಪಾಲಿಗೆ ಬಂದ ಈ ಕರ್ತವ್ಯವನ್ನು ಅತ್ಯಂತ ನಿಷ್ಠೆ, ಪ್ರಾಮಾಣಿಕತೆ ಹಾಗು ದಕ್ಷತೆಯಿಂದ ನಿರ್ವಹಿಸಿದರು. ಕನ್ನಡ ಅಧ್ಯಯನ ಸಂಸ್ಥೆಯ ಜಾನಪದ ವಿಭಾಗಕ್ಕೆ ವಿಶ್ವವಿಖ್ಯಾತಿಯನ್ನು ತಂದುಕೊಟ್ಟರು. ಅಧ್ಯಾಪಕರಾಗಿ ಸೇರಿದ ಇವರು ಚಿಕ್ಕವಯಸ್ಸಿನಲ್ಲಿಯೇ ಪ್ರಾಧ್ಯಾಪಕರಾಗಿ, ತಾವು ಸೇರಿದ ಸಂಸ್ಥೆಯ ನಿರ್ದೇಶಕರಾಗಿ ಮೇಲಿಂದ ಮೇಲೆ ಉನ್ನತ ಪದವಿಯನ್ನು ಪಡೆದುಕೊಂಡರು. ಅಲ್ಲದೆ ಅಂದಿನ ಕುಲಪತಿಗಳಾಗಿದ್ದ ಪ್ರೊ. ದೇಜಗೌ ಅವರ ಆಪ್ತ ಕಾರ್ಯದರ್ಶಿಗಳಾಗಿ ಅಪಾರ ಆಡಳಿತಾನುಭವವನ್ನು ಗಳಿಸಿಕೊಂಡಿದ್ದಾರೆ. ಹೀಗೆ, ವಿಶ್ವವಿದ್ಯಾಲಯದ ಆಡಳಿತ ವಿಭಾಗದಲ್ಲಿಯೂ ಉನ್ನತ ಸ್ಥಾನದಲ್ಲಿ ಕೆಲಸ ನಿರ್ವಹಿಸಿದ್ದಾರೆ. ಆಗಾಗ ವಿಶ್ವವಿದ್ಯಾಲಯದ ಹಿರಿಯ ಶೈಕ್ಷಣಿಕ ಸಮಿತಿಗಳಿಗೆ ಸದಸ್ಯರಾಗಿ ಆಯ್ಕೆಯಾಗಿ ತಮ್ಮ ಪಾಲಿನ ಸಲಹೆ ಸಹಕಾರಗಳನ್ನು ನೀಡಿದ್ದಾರೆ. ಅವರು ಜಾನಪದ ಪ್ರಾಧ್ಯಾಪಕರಾದ ಮೇಲಂತೂ ಬೇರೆ ಬೇರೆ ವಿಶ್ವವಿದ್ಯಾಲಯಗಳ ವಿವಿಧ ಅಧ್ಯಯನ ಮತ್ತು ಪರೀಕ್ಷಾ ಮಂಡಳಿಗಳ ಸದಸ್ಯರಾಗಿ ಕೆಲಸ ಮಾಡಿದ್ದಾರೆ. ಖಾಸಗಿ ಹಾಗೂ ಸರಕಾರೀ ವಲಯಗಳ ಜಾನಪದ

ಕ್ಷೇಮಾಭಿವೃದ್ಧಿಯ ಸಂಘ-ಸಂಸ್ಥೆಗಳಲ್ಲಿ ಶ್ರಮಿಸಿದ್ದಾರೆ. ನಮ್ಮ ನಾಡಿನ ನಾನಾ ಭಾಗಗಳಲ್ಲಿ ಆಗಿಂದಾಗ್ಗೆ ನಡೆಯುವ ತಮ್ಮ ಅಧ್ಯಯನ ಕ್ಷೇತ್ರದ ವಿದ್ವತ್ ಗೋಷ್ಠಿಗಳಲ್ಲಿ, ಸಭೆ ಸಮ್ಮೇಳನಗಳಲ್ಲಿ ಭಾಗವಹಿಸಿ ಕರ್ನಾಟಕ ಜನಪದ ಸಾಹಿತ್ಯ-ಸಂಸ್ಕೃತಿಗಳ ಪರಿಚಯ, ಹಿರಿಮೆ-ವೈಶಿಷ್ಟ್ಯಗಳನ್ನು ಇತರರಿಗೆ ಮನವರಿಕೆ ಮಾಡಿಕೊಟ್ಟಿದ್ದಾರೆ. ಇವರು ಈ ಕ್ಷೇತ್ರದಲ್ಲಿ ಪಡೆದಿರುವ ಅನುಭವ, ಗಳಿಸಿರುವ ವಿದ್ವತ್ತು, ಮಾಡಿಸುವ ಕೆಲಸ ಹಾಗೂ ಪ್ರಕಟಿಸಿರುವ ಕೃತಿಗಳು ಒಂದೊಂದೂ ಅಧ್ಯಯನದ ವಿಷಯವೇ ಎನ್ನುವಷ್ಟು ಅಗಾಧವಾದವೆನ್ನುವುದನ್ನು ಆ ಕ್ಷೇತ್ರದ ಇತರ ಕಾರ್ಯಕರ್ತರು ಚೆನ್ನಾಗಿ ಬಲ್ಲರು.

ಡಾ. ಹಾ.ಮಾ. ನಾಯಕ ಅವರು ಜೀಶಂಪ ಅವರ ಗುರುಗಳು. ಅವರು ಹೀಗೆ ಅಭಿಪ್ರಾಯಪಡುತ್ತಾರೆ: "ಜೀಶಂಪ ಅವರು ಶ್ರದ್ಧಾವಂತ ಉಪಾಧ್ಯಾಯರು, ಪ್ರತಿಭಾನ್ವಿತ ಲೇಖಕ. ಒಳ್ಳೆಯ ವಾಗ್ಮಿ, ಸಂಶೋಧಕರು ಮತ್ತೂ ಜಾನಪದ ವಿಶ್ವಕೋಶ. ಅವರು ಜಾನಪದ ಜಂಗಮ. ಇವರು ಅನೇಕ ಕ್ಷೇತ್ರಗಳಲ್ಲಿ ಪರಿಣತರಾಗಿ, ಸೃಜನಶೀಲ ಸಾಹಿತಿಯಾಗಿ ಕಥೆ, ಪ್ರಬಂಧ, ಕಾದಂಬರಿ, ನಾಟಕಗಳನ್ನು ರಚಿಸಿದ್ದಾರೆ. ಜಾನಪದ ಶೋಧನೆ, ಪ್ರಕಟಣೆ, ಕ್ಷೇತ್ರಕಾರ್ಯ, ಯಕ್ಷಗಾನ, ಸಣ್ಣಾಟ, ದೊಡ್ಡಾಟ, ತೊಗಲುಗೊಂಬೆ, ಸೂತ್ರದಗೊಂಬೆ, ವಿವಿಧ ಜಾನಪದ ಗೋಷ್ಠಿಗಳು - ಇದಕ್ಕಾಗಿಯೇ ತಮ್ಮ ಜೀವಮಾನವನ್ನೆಲ್ಲ ಅರ್ಪಿಸಿದ್ದಾರೆ." ಹೀಗೆ ಜಾನಪದಕ್ಕಾಗಿ ತೇಯ್ದುಕೊಂಡವರು. ತಮ್ಮೆಲ್ಲಾ ಸಾಹಿತ್ಯಿಕ ಚಟುವಟಿಕೆಗಳನ್ನು ಜಾನಪದಕ್ಕಾಗಿ ಮೀಸಲಿಟ್ಟು ಅದರಲ್ಲಿ ತಮ್ಮನ್ನು ತಾವು ಸಂಪೂರ್ಣವಾಗಿ ತೊಡಗಿಸಿಕೊಂಡರು. ಕರ್ನಾಟಕ ಜಾನಪದವನ್ನು ದೇಶ ವಿದೇಶಗಳಲ್ಲೂ ಪರಿಚಯಿಸಿ ಕನ್ನಡ ಜಾನಪದಕ್ಕೆ ಒಂದು ಹೊಸ ನೆಲೆಯನ್ನು ದೊರಕಿಸಿಕೊಟ್ಟರು. ಜೀಶಂಪ ಅವರು ಜನಪದ ಕಲಾವಿದರು, ವಿದ್ಯಾರ್ಥಿಗಳು, ವಿದ್ವಾಂಸರುಗಳೊಡನೆ ಹೊಂದಿದ್ದ ಸ್ನೇಹ ಬಿಡಿಸಲಾಗದ ನಂಟಾಗಿತ್ತು. ಇವರು ಜನಪದ ಕಲಾವಿದರಲ್ಲಿಗೆ ಹೋದಾಗ ತಮ್ಮ ಯಾವುದೇ ಅಧಿಕಾರ, ಅಂತಸ್ತು, ಅಮಲುಗಳನ್ನು ತಮ್ಮಲ್ಲಿ ಇರಿಸಿಕೊಳ್ಳದೆ, ಅವರಲ್ಲಿ ತಾವೂ ಒಬ್ಬರಾಗಿ ಅವರೊಂದಿಗೆ ಬೆರೆತು ಅವರಲ್ಲಿ ಉತ್ಸಾಹ ಹುಮ್ಮಸ್ಸುಗಳನ್ನು ತುಂಬುತ್ತಿದ್ದರು. ಇವರಲ್ಲಿದ್ದ ಸಜ್ಜನಿಕೆ, ಸೌಮ್ಯತೆ, ಸರಳತೆ ಹಾಗೂ ಸ್ನೇಹಮಯತೆ ಕಲಾವಿದರನ್ನು ಆಕರ್ಷಿಸುತ್ತಿದ್ದವು. ಸಂಗ್ರಹಕಾರ್ಯವೇ ಕಷ್ಟ ಎಂಬುವವರಿಗೆ ವಕ್ತೃಗಳ ಅಥವಾ ಕಲಾವಿದರ ಮನಸ್ಸು ಗೆಲ್ಲುವುದರ ಮೂಲಕ ಮಾತ್ರ ಈ ಕಾರ್ಯ ಸಾಧ್ಯ ಎಂಬುದನ್ನು ಇವರು ತೋರಿಸಿಕೊಟ್ಟರು. ಇವರು ಸಂಗ್ರಹಿಸಿ, ಸಂಪಾದಿಸಿ, ಸಂಶೋಧನೆ ನಡೆಸಿ, ಪ್ರಕಟಿಸಿರುವ ಹಾಗೂ ಇನ್ನೂ ಪ್ರಕಟಗೊಳ್ಳದೆ ಅವರಲ್ಲಿ ಉಳಿದಿರುವ ವಿಪುಲವಾದ ಜಾನಪದ ಪ್ರಕಾರಗಳು ಇದಕ್ಕೆ ಉತ್ತಮ ನಿದರ್ಶನವಾಗಿ ಕಂಡುಬರುತ್ತದೆ.

ಕರ್ನಾಟಕದ ಜನಪದ ಕಲೆಗಳನ್ನು ರಾಷ್ಟ್ರಮಟ್ಟದಲ್ಲಿ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಪರಿಚಯಿಸಿ ಕರ್ನಾಟಕದ ಕೀರ್ತಿಗೆ ಮತ್ತೊಂದು ಗರಿ ಮೂಡಿಸಿದವರಲ್ಲಿ ಜೀಶಂಪ ಅವರೂ ಒಬ್ಬರು. ೧೯೮೯ರಲ್ಲಿ ಕರ್ನಾಟಕದ 'ಬೀಸು ಕಂಸಾಳೆ' ಕಲಾತಂಡವನ್ನು

ಟರ್ಕಿ, ಟ್ಯುನೀಷಿಯ, ಸೈಪ್ರಸ್, ಮಾಲ್ಟ್ ದೇಶಗಳಲ್ಲಿ ಪ್ರವಾಸ ಮಾಡಿ ಪ್ರದರ್ಶನ ನಡೆಸಿ ಅಲ್ಲಿನ ಜನರು ಹಾಗೂ ವಿದ್ವಾಂಸರ ಮೆಚ್ಚುಗೆಗೆ ಪಾತ್ರವಾಗುವಂತೆ ಮಾಡಿದರು. ಇಂಗ್ಲೆಂಡ್, ಸ್ಕಾಟ್‌ಲ್ಯಾಂಡ್, ಜರ್ಮನಿ, ಡೆನ್ಮಾರ್ಕ್, ಸ್ವೀಡನ್, ಫಿನ್‌ಲೆಂಡ್, ಜೆಕೊಸ್ಲೋವಾಕಿಯ ದೇಶಗಳಿಗೆ ಭೇಟಿ ನೀಡಿ ಅಲ್ಲಿನ ಜಾನಪದ ಜ್ಞಾನಸಂಪತ್ತನ್ನು ಹೊತ್ತುತಂದು, ಅವನ್ನೆಲ್ಲಾ ಕಾರ್ಯರೂಪಕ್ಕೆ ತರುವ ಆಸೆಯಿಂದಾಗಿ ಅವರು ಕಂಡ "ಜಾನಪದ ವಿಶ್ವವಿದ್ಯಾಲಯ" ದ ಕನಸು ಹಾಗೆಯೇ ಉಳಿಯಿತು. ಶಾಲಾ ಕಾಲೇಜುಗಳ ಮಟ್ಟದಲ್ಲಿ ಜಾನಪದವನ್ನು ಅಧ್ಯಯನ ವಿಷಯವಾಗಿ ಪರಿಗಣಿಸಬೇಕು ಎಂಬ ಇವರ ಪ್ರಯತ್ನ ಫಲಿಸಲಿಲ್ಲ. ಜೀಶಂಪ ಅವರ ಅವಿರತವಾದ ಜಾನಪದ ಸಂಶೋಧನೆ, ಅಧ್ಯಯನಗಳ ಆಸಕ್ತಿಯನ್ನು ಗುರುತಿಸಿದ ಫಿನ್‌ಲೆಂಡ್ ದೇಶದ ಜಾನಪದ ಸಂಸ್ಥೆಯು ೧೯೯೩ರಲ್ಲಿ ಇವರಿಗೆ ತಮ್ಮ ಸಂಸ್ಥೆಯ ಗೌರವ ಸದಸ್ಯತ್ವ ನೀಡಿತು.

ಜಾನಪದ ಎಂದರೆ ಮುಖ ಮುರಿಯುತ್ತಿದ್ದ ಪಂಡಿತ ವರ್ಗವನ್ನು ಜಾನಪದದೆಡೆಗೆ ಸದಾ ತಿರುಗಿ ನೋಡುವಂತೆ ಮಾಡಿದರು. ಅಲ್ಲದೆ ನಾಡಿನ ಹಲವಾರು ಹಿರಿಯ ಹಾಗೂ ಕಿರಿಯ ವಿದ್ವಾಂಸರುಗಳಿಗೆ ಜಾನಪದದ ಬಗೆಗೆ ಅರಿವು ಮೂಡಿಸಿ ಅದರ ನೆಲೆ-ಬೆಲೆಯನ್ನು ತಿಳಿಸಿ ಜಾನಪದ ಅಧ್ಯಯನ ದೀಕ್ಷೆ ನೀಡಿದ ಜಾನಪದ ದೀಕ್ಷಾ ಗುರುಗಳಾದರು. ಇವರ ಮಾರ್ಗದರ್ಶನ ಪಡೆದ ಹಲವಾರು ಜಾನಪದ ವಿದ್ವಾಂಸರು ನಾಡಿನಾದ್ಯಂತ ಜಾನಪದ ಕ್ಷೇತ್ರದಲ್ಲಿ ದುಡಿಯುತ್ತಿದ್ದಾರೆ, ಆಯಾಯಾ ಕ್ಷೇತ್ರಗಳಲ್ಲಿ ಉತ್ತಮ ಸಾಧನೆ ತೋರಿಸಿದ್ದಾರೆ.

ಜೀಶಂಪ ಅವರು ೧೯೯೧ರಲ್ಲಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಅಧ್ಯಕ್ಷರಾಗಿ ನೇಮಕಗೊಂಡರು. ಇವರು ಅನಾರೋಗ್ಯದಿಂದಾಗಿ ಎರಡೂ ಮುಕ್ಕಾಲು ವರ್ಷಗಳ ಸೇವೆ ಸಲ್ಲಿಸಿದರು. ಈ ಸಂದರ್ಭದಲ್ಲಿ ಅವರು ಯೋಜಿಸಿದ 'ಒಂದು ಹಳ್ಳಿಯ ಜಾನಪದ', 'ಒಂದು ಸುತ್ತಿನ ಜಾನಪದ' ಮುಂತಾದವು ಅಜ್ಞಾತ ಕಲೆಗಳು ಹಾಗೂ ಕಲಾವಿದರನ್ನು ಬೆಳಕಿಗೆ ತರಲು ಮಾಡಿದ ಪ್ರಯತ್ನವಾಗಿತ್ತು. ಕರ್ನಾಟಕ ಜಾನಪದದ ಬಗೆಗೆ ಅವರು ಹಾಕಿಕೊಟ್ಟ ಅಧ್ಯಯನ ಹಾಗೂ ಸಂಶೋಧನೆಯ ಹೊಸ ಆಯಾಮಗಳು ಇಂದಿಗೂ ನಮಗೆ ಮಾರ್ಗದರ್ಶನವಾಗಿವೆ. ಹೀಗೆ ಜಾನಪದಕ್ಕೆ ತನ್ನೆಲ್ಲಾ ಶಕ್ತಿ-ಆಸಕ್ತಿಯನ್ನು ಧಾರೆಯೆರೆದ ಇವರು ಜಾನಪದ ಅಧ್ಯಯನಕಾರರ ಕಣ್ಮಣಿಯಾಗಿದ್ದಾರೆ. ಇವರನ್ನು ಜಾನಪದ ಅಧ್ಯಯನಕಾರರು ಹಾಗೂ ಇವರ ಶಿಷ್ಯರು, ಗುರುಗಳು, ಜಾನಪದ ಕಲಾವಿದರ ಪಡೆಯೇ ಅಲ್ಲದೆ ಇತರರೂ ಸಹ ಇವರು ಜಾನಪದಕ್ಕೆ ಮಾಡಿದ ಸೇವೆಗಾಗಿ ಜಾನಪದ ಜಾಣ, ಜಾನಪದ ಭೀಷ್ಮ, ಜಾನಪದ ಜಂಗಮ, ಜಾನಪದ ದೀಕ್ಷಾ ಗುರು, ಜಾನಪದ ವಿಶ್ವಕೋಶ, ಜಾನಪದ ಪಂಪ, ಜಾನಪದ ಮಹಾಮತ್ಸ್ಯ - ಎಂದೆಲ್ಲಾ ಪ್ರಶಂಸೆ ಮಾಡಿದ್ದಾರೆ. ಹೀಗೆ ಸುಂದರವಾಗಿ ಬೆಳೆದ ಈ ಹೆಮ್ಮರ ಜವರಾಯನ ಕಣ್ಣಿನಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಕುಡುಗೋಲು ಕೊಡಲಿ ಹೆಗಲೇರಿ ಬಂದ ಜವರಾಯ ಅವರನ್ನು ತನ್ನೊಂದಿಗೆ ಕೊಂಡೊಯ್ದು.

❄

ಸಾಹಿತ್ಯ ಕ್ಷೇತ್ರ

ಪ್ರಸಿದ್ಧ ಜಾನಪದ ವಿದ್ವಾಂಸರು, ಕಥೆಗಾರರು, ಪ್ರಬಂಧಕಾರರೆಂದು ಹೆಸರಾಗಿರುವ ಜೀಶಂಪ ಅವರು ಉತ್ತಮ ಕವಿಗಳೂ ಹೌದು. ಇವರು ಸಾಹಿತ್ಯ ಪ್ರಪಂಚದ ಪ್ರವೇಶ ಹೊಂದಿದುದು ಈ ಮೂಲಕವೇ ಎಂದಾಗ ಜಾನಪದ ಅಧ್ಯಯನದಲ್ಲಿ ಸಂಪೂರ್ಣವಾಗಿ ನಿಮಗ್ನರಾಗಿರುವ ಇವರನ್ನು ಕಂಡು ತುಂಬಾ ಆಶ್ಚರ್ಯವೆನಿಸುತ್ತದೆ.

"ಪ್ರತಿಯೊಬ್ಬ ಲೇಖಕನೂ ಸಾಮಾನ್ಯವಾಗಿ ಕಾವ್ಯರಚನೆಯ ಮೂಲಕವೇ ಸಾಹಿತ್ಯ ಪ್ರಪಂಚಕ್ಕೆ ಕಾಲಿಡುತ್ತಾನೆ ಎಂಬ ಮಾತೊಂದಿದೆ. ಇದಕ್ಕೆ ಜೀಶಂಪ ಅವರೂ ಹೊರತಾಗಿಲ್ಲ. ೧೯೫೩-೫೪ ರಷ್ಟು ಹಿಂದೆಯೇ ಕಾವ್ಯಕಟ್ಟುವ ಮೂಲಕವೇ ತಮ್ಮ ಸಾಹಿತ್ಯ ಜೀವನವನ್ನು ಆರಂಭಿಸಿದರು. "ದಿಬ್ಬದಾಚೆ" ಮತ್ತು"ಜೀವನಗೀತ" ಇವರ ಕಾವ್ಯಕೃತಿಗಳು.

"ದಿಬ್ಬದಾಚೆ"೧೯೫೩ರಷ್ಟು ಹಿಂದೆಯೇ ಪ್ರಕಟವಾದ ಮನೋಜ್ಞವಾದ ಒಂದು ಕಥನ ಕಾವ್ಯ. ಇದು ಜೀಶಂಪರವರ ಚೊಚ್ಚಲು ಕೃತಿ. ಸುಮಾರು ೧೨೫೪ ಸಾಲುಗಳು ೫೪ ಪುಟಗಳಲ್ಲಿ ರೂಪುಗೊಂಡ ಒಂದು ಸುದೀರ್ಘವಾದ ಕಥನ ಕಾವ್ಯ. ಬಾಲ್ಯದಲ್ಲಿ ತಾವು ಕೇಳಿ ಸವಿದ ಜನಪದ ಕಥೆಯ ಆಧಾರದ ಮೇಲೆ ಈ ಕೃತಿ ರಚಿಸಲ್ಪಟ್ಟಿದೆ.

ಗುಬ್ಬನಹಳ್ಳಿಯ ದಿಬ್ಬದಾಚೆಯ ದಟ್ಟವಾದ ತೋಪಿನಲ್ಲಿ ಬಂದು ನೆಲೆಸಿದ ಕೋತಿಗಳ ದಂಡು ಮಾಡಿದ ಹಾವಳಿ, ಅವುಗಳನ್ನು ಓಡಿಸಲು ಹಳ್ಳಿಯ ಜನರು ಪಟ್ಟಪಾಡು ಈ ಕಥನ ಕಾವ್ಯದ ಉದ್ದಕ್ಕೂ ಕಣ್ಣಿಗೆ ಕಟ್ಟುವಂತೆ ಚಿತ್ರಿತವಾಗಿದೆ.

ಬೆಳ್ಳೂರಾಚೆಯ ಬೆಟ್ಟಗಳಿಳಿದರೆ
ಗಿರಿದರಿ ಗಂಜದೆ ಮುಳ್ಳನೆ ತುಳಿದರೆ
ನಡೆದರೆ ಮುಂದಕೆ ದಾರಿಯು ಸಾಗುತ
ಗುಬ್ಬನಹಳ್ಳಿಯು ತೋರಲು ದೂರದಿ........

ಹೀಗೆ ಸರಳವಾದ ಶೈಲಿಯಲ್ಲಿ ನಿರರ್ಗಳವಾಗಿ ಕಥೆ ಮುಂದುವರೆಯುತ್ತದೆ. ತೋಪಿನ ಮರಗಿಡಗಳ ವರ್ಣನೆ, ವಲಸೆಬಂದ ಕಪಿಗಳ ದಂಡು ಅಲ್ಲಿ ನಡೆಸುವ ಉಪಟಳ - ಇದಕ್ಕಾಗಿ ಪೋಲಿಸರು ಪಟ್ಟಪಾಡಿನ ವರ್ಣನೆ ಮನಕರಗಿಸುವಂತಿದೆ.

ತಬ್ಬಲಿಯಾದ ಅವರ ಬಂದೂಕುಗಳು ನೆಲಕಚ್ಚಿದ ನಂತರ, ಮಾರಿಯನ್ನು ಅರ್ಚಿಸಿ ಹನುಮನನ್ನು ಮರೆತ ಕಾರಣ ಹೀಗಾಗಿದೆ ಎಂದು ಬೆಳ್ಳಿಯ ಕಿರೀಟ ಮಾಡಿಸುತ್ತಾರೆ. ಅದೇ ಕಾಲಕ್ಕೆ ಆ ತೋಪಿಗೆ ಹುಲಿಯೊಂದು ಬಂದು ನೆಲೆಸಿದಾಗ ಅದರ ಆರ್ಭಟದಿಂದ ಕಪಿಗಳು ತಾವಾಗಿಯೇ ಅಲ್ಲಿಂದ ಕಾಲು ಕೀಳುತ್ತವೆ. ಹೀಗಾಗಿ ಹನುಮಂತನೇ ಕಪಿಗಳನ್ನೋಡಿಸಿದನೆಂದು ಜನರ ನಂಬಿಕೆ. ಮತ್ತೆ ಹುಲಿಯ ಉಪಟಳವನ್ನು ಕಂಡು ಮತ್ತಷ್ಟು ಹೆದರುತ್ತಾರೆ. ಹುಲಿಯ ಬಾಯಿಂದ ಪಾರಾಗುವ ಬಗೆಯನ್ನು ಕುರಿತು ಚಿಂತಿಸುತ್ತಾರೆ. ತಪ್ಪಿಸಿಕೊಂಡ ಗೌಡರ ಮನೆಯ ಹಸುವನ್ನು ಹುಡುಕುತ್ತಾ ಆ ತೋಪಿಗೆ ಬಂದ ಮನೆಯ ಆಳು ಜವರ ಹುಲಿಯೊಡನೆ ಸೆಣಸಾಡಿ ಕೊಂದು ಅದರ ಪಂಜಿನ ಗಾಯದಿಂದ ಸಾಯುತ್ತಾನೆ. ಈಗಲೂ ಸಹ ದಿಬ್ಬದ ಆಚೆಯ ಬಯಲು ತೋಪಿನಲ್ಲಿ ಜವರ ಮಚ್ಚುಹಿಡಿದು ತಿರುಗುವನೆಂದು ಜನರು ನಂಬುತ್ತಾರೆ. ಈ ಹೇಳಿಕೆಯೊಡನೆ ಕಥನಕಾವ್ಯ ಕೊನೆಗೊಳ್ಳುತ್ತದೆ.

ಹೀಗೆ "ದಿಬ್ಬದಾಚೆ" ಕಥನ ಕಾವ್ಯವು ಗ್ರಾಮದ ಒಂದು ಸುಂದರ ಚಿತ್ರವನ್ನು ಓದುಗರಲ್ಲಿ ಮೂಡಿಸುವುದರ ಜೊತೆಗೆ ಕಥೆಯ ಜಾಡಿನಲ್ಲಿ ಓದುಗರನ್ನು ಕರೆದೊಯ್ಯುತ್ತ ಮುಂದಿನ ಘಟನೆಯ ಬಗೆಗೆ ಕುತೂಹಲವನ್ನು ಕೆರಳಿಸುತ್ತದೆ. ಇಲ್ಲಿ ಕವಿ ಗ್ರಾಮಜೀವನದ ವಿವಿಧ ಮುಖಗಳ ಚಿತ್ರಣವನ್ನು ಮೂಡಿಸುವುದರ ಜೊತೆಗೆ ಭಾಷೆ ಬಳಕೆಯ ಕ್ರಮವನ್ನು ಸುಂದರವಾಗಿ ಹೆಣೆದಿದ್ದಾರೆ. ಹೀಗಾಗಿ ಕನ್ನಡದ ಅತ್ಯುತ್ತಮ ಕಥನ ಕವನಗಳಲ್ಲಿ ಇದು ಒಂದು ವಿಶಿಷ್ಟ ಸ್ಥಾನವನ್ನು ಪಡೆದುಕೊಂಡಿದೆ.

"ಜೀವನಗೀತ" ಜೀಶಂಪ ಅವರ ಎರಡನೆಯ ಕೃತಿ. ಇದು ೩೦ ಸುಂದರ ಭಾವಗೀತೆಗಳು ಹಾಗೂ ಒಂದು ನೀಳ್ಗವಿತೆಯನ್ನು ಒಳಗೊಂಡ ಕವನ ಸಂಕಲನ. ಕನ್ನಡದಲ್ಲಿ ನವೋದಯ ಕಾವ್ಯದ ಕಾಲ ಮುಗಿದು ನವ್ಯಕಾವ್ಯ ಪ್ರಾಚುರ್ಯ ಪಡೆಯುತ್ತಿದ್ದ ಸಂಕ್ರಮಣ ಕಾಲದಲ್ಲಿ ಜೀಶಂಪ ಈ ಕಾವ್ಯ ಕೃಷಿಯಲ್ಲಿ ತೊಡಗಿದರು. ಈ ಎರಡರ ಸಮನ್ವಯದ ಹಾದಿಯಲ್ಲಿ ಮುನ್ನಡೆದಿರುವುದು ಅವರು ಈ ಸಂಕಲನದಿಂದ ತಿಳಿದುಬರುತ್ತದೆ. ಇಲ್ಲಿನ ಕೆಲವು ಕವನಗಳು ಅವರ ಕವಿಮನೋಧರ್ಮಕ್ಕೆ ಹಿಡಿದ ಕನ್ನಡಿಯಂತಿವೆ. ಅವನ ಹಾದಿ, ಹಾರಿದ ಹಕ್ಕಿಗಳು, ಶ್ರೀ ಆದಿಚುಂಚನಗಿರಿಯ ತಪ್ಪಲಲ್ಲಿ, ಬೆಳ್ಮೋಡಗಳಿಗೆ, ಇನಿಯಗಾನದ ಮೆಟ್ಟಿಲು, ಮಳೆಬಂದ ಇರುಳಿನಲಿ, ಜೀವನಗೀತ- ಇತ್ಯಾದಿ ಅಮೂಲ್ಯ ಕವನಗಳಲ್ಲಿ 'ಶ್ರೀ ಆದಿ ಚುಂಚನಗಿರಿ ತಪ್ಪಲಲ್ಲಿ' ಎಂಬುದರಲ್ಲಿ ಶ್ರೀಗಿರಿಯ ಸೌಂದರ್ಯ ಹಾಗೂ ಪ್ರಶಾಂತ ಸಾನ್ನಿಧ್ಯಕ್ಕೆ ಮನಸೋಲುವ ಕವಿ ಇಲ್ಲ 'ಸತ್ಯಂ, ಶಿವಂ, ಸುಂದರಂ' ಎಂಬ ದರ್ಶನ ಪಡೆಯುತ್ತಾರೆ. 'ನಾ ಬರುವೆ', 'ಇನಿಯ ಗಾನದ ಮೆಟ್ಟಿಲು', 'ಹಾರಿದ ಹಕ್ಕಿಗಳು','ಬಾರೆ ಕರುಣೆಯ ಕಾಲಿಡು' 'ನೀರೆಳೆಸದ ಬೆಳೆ', 'ದುರ್ದಿನ' 'ಮೂಲೆಯಲ್ಲೊರಗಿದ ಮುದುಕನಿಗೆ' ಮುಂತಾದವು ಕವಿಯ ಸಹಜ ಸ್ಫೂರ್ತಿಯಿಂದ ಮೂಡಿಬಂದಿರುವ ನುಡಿಚಿತ್ತಾರಗಳಾಗಿ ಓದುಗರನ್ನು ಬೆರಗುಗೊಳಿಸುವ

ಕಲ್ಪನಾಶಕ್ತಿಯಿಂದ ಕೂಡಿವೆ. ಕವನ ಸಂಕಲನದ ಶೀರ್ಷಿಕೆಯ ಕವನವಾದ 'ಜೀವನ ಗೀತ' ಇದು ಕವಿಯ ಜೀವನ ಗೀತವೂ ಹೌದು. ಜೀಶಂಪರವರ ಕಾವ್ಯಶಕ್ತಿ, ಕವನಗಳಲ್ಲಿ ಕಂಡುಬರುವ ಲಾಲಿತ್ಯ, ಭಾವನೆ.ಚಿತ್ರಣ, ಸರಳವಾದ ಮತ್ತು ನಿರರ್ಗಳ ಕಾವ್ಯ ಶೈಲಿ ಕವನಗಳ ಉತ್ಕೃಷ್ಠತೆಗೆ ಕಾರಣವಾಗಿದೆ. ಅಸ್ಪಷ್ಟತೆಗೆ ಅವಕಾಶವಿಲ್ಲ. ಗೊರೂರರ ಕಥೆಗಳ ಹತ್ತಿರ ಈ ಕಥೆಗಳನ್ನಿಟ್ಟು ನೋಡಿದಾಗ ಪರಮಶಿವಯ್ಯನವರ ಬರಹದಲ್ಲಿ ಹೊಸತನ ಗೋಚರವಾಗುತ್ತದೆ. ಹಳ್ಳಿಯ ಜೀವನವನ್ನು, ಭಾವನಾತ್ಮ ಕತೆಯಿಂದ ನೋಡದೆ, ಆದರೂ ಸಹಾನುಭೂತಿಯನ್ನು ಕಳೆದುಕೊಳ್ಳದೆ ಕಥೆಗಾರರು ಅತ್ಯಂತ ಸಹಜವಾಗಿ ಚಿತ್ರಿಸಿದ್ದಾರೆ. ಅಪಕ್ವ ಪ್ರಣಯದ, ಕೃತ್ತಿಮ ಸುಕುಮಾರತೆಯ ಕಡೆಗಳಿಂದ ಹುಟ್ಟಿದ ಬೇಸರವನ್ನು ಆ ಕತೆಗಳ ನಿಷ್ಠುರ ವಾಸ್ತವತೆಯು ಕ್ಷಣದಲ್ಲಿ ಕಳೆದು ಬಿಡುತ್ತದೆ. ಇವರ ಕಥೆಗಳು ಮಲೆನಾಡಿನ ಜೀವನ ದರ್ಶನವನ್ನು ಚಿತ್ರಿಸುವುದಲ್ಲದೆ ಮಾನವ ಸ್ವಭಾವವನ್ನು ಸ್ಪಷ್ಟವಾಗಿ ಕಣ್ಣೆದುರು ಮೂಡಿಸುತ್ತದೆ. ತಾವು ಕಂಡುಂಡ ಸುಂದರ ಗವಿ, ಕಂದರ, ಗಿರಿಶ್ರೇಣಿ, ಬಂಡೆಗಳ ಸಾಮ್ರಾಜ್ಯದಲ್ಲಿ ಎಲ್ಲಿಗೋ ಏರಿಸಿ ಎಲ್ಲಿಗೋ ಇಳಿಸುವ ದಾರಿಯಲ್ಲಿ ಎದೆಗುಂದದೆ ಹೊಸಹೊಸದರ ಅನ್ವೇಷಣೆಗೆ ತೊಡಗುವ ಮನುಷ್ಯ ಸಹಜವಾದ ಪ್ರವೃತ್ತಿಯನ್ನು ಇಲ್ಲಿ ಓದುಗನಿಗೆ ದಿಗಿಲುಹುಟ್ಟಿಸುವಂತೆ ಚಿತ್ರಿಸಿದ್ದಾರೆ.

'ಬೆಳ್ಳಿಚುಕ್ಕಿ', ಎಡದಿಣ್ಣೆಯ ಆಲ','ಹಾಡು ಕರೆದ ಹಾದಿಯಲ್ಲಿ' ಇವು ಎರಡನೆಯ ಗುಂಪಿಗೆ ಬರುವ ಶುಧ್ಧ ಜಾನಪದಕ್ಕೆ ಸಂಬಂಧಿಸಿದ ಪ್ರಬಂಧಗಳು. ಬೆಳ್ಳಿಚುಕ್ಕಿಯು, ಜನಪದ ಗೀತ ಸಾಹಿತ್ಯದ ಬಹುಪಾಲು ಸೃಷ್ಟಿಯ ಮೂಲವಾದ ರಾಗಿ ಕಲ್ಲನ್ನು ಕುರಿತದ್ದಾಗಿದೆ. ಇದು ಒಬ್ಬಂಟಿಯಾಗಿ ಕುಳಿತು ಬೀಸುವ ಹೆಣ್ಣಿನ ಸಂಗತಿಯೂ ಹೌದು. ತುಂಬು ಸಂಸಾರದಲ್ಲಿ ಬಾಳುವ ಹೆಣ್ಣು ತನ್ನ ನೋವು ನಲಿವುಗಳನ್ನು ಆ ಕಲ್ಲಿನ ಮುಂದೆ ಕುಳಿತು ಹಾಡುಗಳಲ್ಲಿ ನಿವೇದಿಸಿಕೊಳ್ಳುವ ಸುಂದರ ಸನ್ನಿವೇಶವನ್ನು 'ಬೆಳ್ಳಿಚುಕ್ಕಿ' ಪ್ರಬಂಧದಲ್ಲಿ ಕಾಣಬಹುದು.

ತನ್ನ ಜೀವನವನ್ನೇ ಕರಪಾಲವೆಂಬ ಜನಪದ ಕಲೆಗೆ ಮೀಸಲಿಟ್ಟ, ಜನಪದ ಕಲಾವಿದ ಕರಪಾಲ ಸಿದ್ದಯ್ಯನೆಂದೇ ಹೆಸರಾಗಿರುವ ಕಲಾವಿದನೊಬ್ಬನ ಕಲಾ ಪ್ರೌಢಿಮೆಯನ್ನು ಅರ್ಥವತ್ತಾಗಿ ಮನಮಿಡಿಯುವಂತೆ ಪ್ರಬಂಧಕಾರರು 'ಎಡದಿಣ್ಣೆಯ ಆಲ' ದಲ್ಲಿ ಚಿತ್ರಿಸಿದ್ದಾರೆ.

'ಹಾಡು ಕರೆದ ಹಾದಿಯಲ್ಲಿ' ಇದು ಜಾನಪದ ಸಂಪ್ರದಾಯದಲ್ಲಿ ಜುಂಜಪ್ಪನಿಗೆ ಸಂಬಂಧಿಸಿದ್ದು. ಜಾನಪದದಲ್ಲಿ ಅಪಾರ ಆಸಕ್ತಿ ಹೊಂದಿರರುವ ಲೇಖಕರು, ಹೊಸ ಹೊಸ ಸಂಪ್ರದಾಯಕ್ಕೆ ಸಂಬಂಧಿಸಿದಂತೆ ಕಲಾವಿದರ ಬೇಟಿಗೆ ಹೊರಟಾಗ, ಕಲಾವಿದರು ಹಾಗೊಮ್ಮೆ ಹೀಗೊಮ್ಮೆ ಸಿಕ್ಕಾಗ ನಿಧಿ ಕಂಡಂತೆ ಹಿಗ್ಗುವ ಇವರು,ಇಂತಹ ಹಲವಾರು ವಸ್ತು, ಘಟನೆ, ವ್ಯಕ್ತಿಗಳನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಾರೆ.

ಮೂರನೇ ಗುಂಪಿನ ಪ್ರಬಂಧಗಳಾದ 'ನಮ್ಮ ಮಗುವಿಗೊಂದು ಹೆಸರು', 'ರಾಕ್ಷಸ ಬಾಹು', 'ಅಡವಿಯ ಗಿಡ', 'ನೆರೆಹೊರೆ', 'ಮಾದನ ಮನೆ' ಮತ್ತು 'ಅಗೋಚರ ಬಂಧುಗಳು' ಈ ಆರು ಪ್ರಬಂಧಗಳಲ್ಲಿ ವಿಭಿನ್ನ ವಸ್ತುಗಳಲ್ಲಿ ಸಮಾಜವನ್ನು ಕುರಿತಂತೆ ಟೀಕೆ, ವಿಡಂಬನೆ, ವಿಶ್ಲೇಷಣೆ, ಕನಿಕರ ಮತ್ತು ಮಾನವೀಯತೆ ಕಂಡುಬರುತ್ತವೆ.

'ರಾಕ್ಷಸ ಬಾಹು' ಒಂದು ಚಿಂತನಾತ್ಮಕ ವಿಚಾರ ಪ್ರಬಂಧ. ವಿಜ್ಞಾನದ ರಾಕ್ಷಸ ಹಿಡಿತದಿಂದ ಮಾನವ ಜೀವನದಲ್ಲಿ ಉಂಟಾಗುವ ಪ್ರತಿಕೂಲಗಳನ್ನು ಇಲ್ಲಿ ಸ್ಪಷ್ಟೀಕರಿಸಿದ್ದಾರೆ. ಈ ಎಲ್ಲಾ ಪರಿಣಾಮಕ್ಕೆ ಮೂಕ ಸಾಕ್ಷಿಯಾಗಿ ಆಲದ ಮರವನ್ನು ಚಿತ್ರಿಸಿರುವುದು ಪ್ರಬಂಧಕ್ಕೆ ಸಾಂಕೇತಿಕ ಅರ್ಥ ನೀಡುವಂತಿದೆ.

ಗ್ರಾಮೀಣ ಬದುಕಿನಲ್ಲಿ ಕಾಣಬರುವ ಜನಸಾಮನ್ಯರ ಜೀವನ ವೈವಿಧ್ಯಮಯ ಹಾಗೂ ವೈಶಿಷ್ಟ್ಯಪೂರ್ಣ. ಬದುಕಿನ ಹೋರಾಟದಲ್ಲಿ ಅವರು ವಹಿಸುವ ಪಾತ್ರಗಳು ಹಲವು. ಆ ಪರಿಸರದಿಂದ ಬಂದವರಿಗೆ ಮಾತ್ರ ಅದು ಅರ್ಥವಾಗುವುದು ಸಾಧ್ಯವೆನಿಸುತ್ತದೆ. ಇದಕ್ಕೆ ಪ್ರತಿಯಾಗಿ ಪ್ರಬಂಧಕಾರರು ಅಂಥ ಗ್ರಾಮ್ಯ ಜೀವಿಯೊಬ್ಬನ ಬದುಕಿನ ಕಥಾನಕವನ್ನು 'ಅಡವಿಯ ಗಿಡ' ಪ್ರಬಂಧದಲ್ಲಿ ಮೂಡಿಸಿದ್ದಾರೆ.

'ಮಾದನ ಮನೆ' ಎಂಬ ಪ್ರಬಂಧಲ್ಲಿ ಆ ಊರಿನ ಶ್ರೀಮಂತನೊಬ್ಬ ಊರಲ್ಲಿಲ್ಲದಾಗ ಬಡವನೊಬ್ಬ ತನ್ನ ಹೊಸಮನೆಯ ಗೃಹಪ್ರವೇಶ ನೆರವೇರಿಸಿದ್ದರಿಂದ, ಕೋಪಗೊಂಡ ಶ್ರೀಮಂತ ಆ ಬಡವನಿಗೆ ತೊಂದರೆ ಕೊಟ್ಟು, ಪುನಃ ತನ್ನನ್ನೇ ಆಶ್ರಯಿಸಿ ಗೃಹಶಾಂತಿಯನ್ನು ತನ್ನ ನೇತೃತ್ವದಲ್ಲೇ ನಡೆಯುವಂತೆ ಮಾಡಿಸಿ ಹಿಗ್ಗುವುದೇ ಇಲ್ಲಿನ ಮುಖ್ಯ ವಸ್ತುವಾಗಿದೆ. ಬಡವನೊಬ್ಬ ತನ್ನ ಸ್ವಂತ ಬದುಕಿನಲ್ಲಿ ಸ್ವತಂತ್ರವಾಗಿ ಬದುಕಲು ಬಿಡಲೊಲ್ಲದರಲ್ಲಿ ನಮ್ಮ ಜನ್ಮದ ಸ್ವರೂಪ ಸ್ಪಷ್ಟವಾಗಿ ರೂಪುಗೊಂಡಿದೆ.

ಸಂಕಲನದ ಕೊನೆಯ ಪ್ರಬಂಧ 'ಅಗೋಚರ ಬಂಧುಗಳು'. ಹಳ್ಳಿಯ ಜನರು ನಂಬುವ ದೆವ್ವ ಪಿಶಾಚಿಗಳನ್ನು ಕುರಿತಂತೆ ಜನಜನಿತವಾದ ಗಾಳಿಸುದ್ದಿಯನ್ನು ಆಧಾರ ವಾಗಿಟ್ಟು ಕೊಂಡು ಕೆಲವು ವಿಚಾರಗಳನ್ನು ಇಲ್ಲಿ ಪ್ರಸ್ತಾಪಿಸಿದ್ದಾರೆ. ಅಲ್ಲದೆ ಅತಿಮಾನುಷ ಚಟುವಟಿಕೆಗಳ ಬಗೆಗೆ ಹಲವಾರು ಘಟನೆಗಳನ್ನು ಉದಾಹರಿಸಿ ತಮ್ಮ ಅಭಿಪ್ರಾಯಗಳನ್ನು ಸ್ಪಷ್ಟಪಡಿಸಿದ್ದಾರೆ. ಇದು ವಿಚಾರ ಪ್ರಚೋದನೆಗೆ ಅನುವು ಮಾಡಿಕೊಡುವ ಪ್ರಂಬಂಧವೆನಿಸುತ್ತದೆ. ಓಟ್ಟಾರೆಯಾಗಿ ಹೇಳುವುದಾದರೆ ಇಲ್ಲಿನ ಪ್ರಬಂಧಗಳು ಕೇವಲ ಹರಟೆ ಕೊಚ್ಚಲು ಹೆಣೆದ ಗೊಡ್ಡು ಬರಹಗಳಲ್ಲ, ಅನುಭವಿ ಪ್ರಬಂಧಕಾರನಿಂದ ಮೂಡಿಬಂದ ಯಶಸ್ವಿ ಬರಹಗಳು. ನಮ್ಮ ಗ್ರಾಮಿಣ ಸಂಸ್ಕೃತಿ, ಅಲ್ಲಿನ ಬದುಕಿನ ಸಾರ, ಪ್ರಬಂಧಕಾರರ ಅನುಭವ ಮಡುಗಟ್ಟಿರುವ ಯಶಸ್ವಿ ಬರಹಗಳಾಗಿವೆ. ಯಾವುದೇ ವಸ್ತು ತೆಗೆದು ಕೊಂಡಾಗಲೂ ಅದರ ಪ್ರಾರಂಭ, ಅದನ್ನು ಬೆಳೆಸುವ ಬಗೆ ಹಾಗೂ ಮುಕ್ತಾಯದ ಎಲ್ಲ ವಿಧಾನಗಳೂ ಅಚ್ಚುಗಟ್ಟಾಗಿ ರೂಪುಗೊಂಡಿರುವುದು ಕಂಡುಬರುತ್ತದೆ.

ಇದುವರೆಗಿನ ಒಟ್ಟಾರೆ ಪ್ರಬಂಧ ಸಾಹಿತ್ಯವನ್ನು ಗಮನಿಸಿದಾಗ ನಮ್ಮ ಸಂಸ್ಕೃತಿಯ ತಾಯಿ ಬೇರಾದ ಜನಪದವನ್ನು ವಸ್ತುವಾಗಿರಿಸಿಕೊಂಡು ಪ್ರಬಂಧ ರಚನೆ ಮಾಡಿದ ಉದಾಹರಣೆ ಕಡಿಮೆ ಎಂದೇ ಹೇಳಬೇಕು. ಇಲ್ಲಿನ ರಚನೆಗಳು ಇದಕ್ಕೆ ಹೊರತಾಗಿವೆ. ಭಾಷೆ ಕೂಡ ಸುಂದರವಾದ ನುಡಿಗಟ್ಟುಗಳಿಂದ ಕೂಡಿದ್ದು, ಓದುಗನ ಮನಸ್ಸನ್ನು ವಿಷಯಗಳ ಮೇಲೆ ಕೇಂದ್ರೀಕರಿಸಿ, ತನ್ನದೇ ಮತ್ತೊಂದು ಅನುಭವ ಇದಿರಬಹುದೇನೋ ಎಂಬ ಭಾವನೆ ಮೂಡಿಸುತ್ತದೆ. ಹೀಗೆ ಒಟ್ಟಾರೆಯಾಗಿ ದಟ್ಟ ಅನುಭವ, ಉತ್ತಮ ವರ್ಣನಾ ಕಲೆ ಹಾಗೂ ವಿಶ್ಲೇಷಣಾ ಶಕ್ತಿಯಿಂದಾಗಿ 'ಮೇದರ ಕಲ್ಲು' ಪ್ರಬಂಧ ಸಂಕಲನ ಕನ್ನಡ ಪ್ರಬಂಧ ಸಾಹಿತ್ಯಗಳ ಸಾಲಿನಲ್ಲಿ ಉನ್ನತ ಸ್ಥಾನ ಪಡೆದು ಕೊಂಡಿದೆ.

ಕಾವಲುಗಾರ ಮತ್ತು ಇತರ ಕಥೆಗಳು

ಕೀರ್ತಿನಾಥ ಕುರ್ತುಕೋಟಿಯವರು ತಮ್ಮ 'ಯುಗಧರ್ಮ ಹಾಗೂ ಸಾಹಿತ್ಯದರ್ಶನ-೧೯೯೧' ಕೃತಿಯಲ್ಲಿ ಸಣ್ಣಕಥೆಗಳು ವಿಭಾಗದಲ್ಲಿ ಜೀಶಂಪರವರ 'ಕಾವಲುಗಾರ ಮತ್ತು ಇತರ ಕಥೆಗಳು' ಕೃತಿಯ ಬಗೆಗೆ ಹೀಗೆ ಅಭಿಪ್ರಾಯ ಪಡುತ್ತಾರೆ. ಜೀಶಂಪ ಅವರದು ಒಂದೇ ಒಂದು ಸಂಗ್ರಹ (ಕಾವಲುಗಾರ ಮತ್ತು ಇತರ ಕಥೆಗಳು) ಇಲ್ಲಿಯ ಕಥೆಗಳಲ್ಲಿ ಗ್ರಾಮ ಜೀವನದ ಅನೇಕ ಸುಳಿವುಗಳನ್ನು ಬಣ್ಣಿಸಲಾಗಿದೆ. 'ಕಾವಲುಗಾರ' ಎಂಬ ಕಥೆಯಲ್ಲಿ ಮಗನ ಮೇಲಿನ ವ್ಯಾಮೋಹ, ಧಣಿಯ ಬಗೆಗೆ ಭಕ್ತಿ ಇವೆರಡರ ಒಳತೋಟಿಯಲ್ಲಿ ಸಿಕ್ಕ ಕಾವಲುಗಾರ, ತನಗರಿವಿಲ್ಲದೆಯ್ಯೆ ತನ್ನ ಮಗನನ್ನು ಹೋಡೆದು ಕೊಲ್ಲುತ್ತಾನೆ. ಆ ಮಗ ಹೇಳಿ ಕೇಳಿ ಅಯ್ಯೋಗ್ಯ, ಕೆಲಸಕ್ಕೆ ಬಾರದವ. ಆದರೂ ಏಟು ಬಿದ್ದು, ಅವನು ನೋವಿನಿಂದ ಚೀರಿದಾಗ, ಆ ದನಿಯಲ್ಲಿ ಅಪರಾಧಿಯ ನೋವೆಲ್ಲ ತುಂಬಿಕೊಂಡ ಅನುಭವವಾಗುತ್ತದೆ. ಹೀಗೆ ಅಂತರಂಗದ ಭಾವನೆಗಳನ್ನೆಲ್ಲ ದೈಹಿಕತೆಯಲ್ಲಿ ರೂಪಾಂತರಿಸಿ ಮೂರ್ತವಾಗಿ ಅನುಭವ ಯೋಗ್ಯವನ್ನಾಗಿ ಮಾಡಿರುವುದು ಈ ಕಥೆಗಳಲ್ಲಿಯ ವೈಶಿಷ್ಟ್ಯವೆಂದೇ ಹೇಳಬಹುದು. 'ಮಮತೆಯ ಜೀವ' ಈ ಸಂಗ್ರಹದಲ್ಲಿಯ ಇನ್ನೊಂದು. ಪರಿಪೂರ್ಣವಾದ ಕಥೆಯಾಗಿದೆ. ಸಿಳ್ಳ ಸೊಸೆಯ ಮೇಲೆ ಸಿಟ್ಟಿಗೆದ್ದು ಮಗನೊಡನೆ ಇರಲು ಬಯಸದೆ ಬೇರೆಡೆಗೆ ಇರುತ್ತಾನೆ. ಆದರೆ ಮೊಮ್ಮಗನ ಬೇನೆ ಗುಣವಾಗ ಬೇಕೆಂದು ಸಾಲ ಮಾಡಿದ್ದ ಸಿಳ್ಳ ಅದನ್ನು ತೀರಿಸಲಾಗದೆ ಒದ್ದಾಡುತ್ತಾನೆ. ಮಗನ ಬಳಿ ಹಣ ಕೇಳೋಣವೆಂದು ಹೋದರೆ ಆ ಮಗನು ತಂದೆಯನ್ನು ಬಾಯಲ್ಲಿ ರಕ್ತ ಬರುವವರೆಗೆ ಗುದ್ದಿ ಹೊರಗೆ ಹಾಕುತ್ತಾನೆ. ಈ ಕಥೆಯಲ್ಲಿ ಹಿಂಸೆ ತುಂಬಿ ತುಳುಕುತ್ತದೆಯಾದರೂ ಎಲ್ಲಿಯೂ ಅಸಹಜತೆ ಕಾಣಸಿಗುವುದಿಲ್ಲ.

ಜೀಶಂಪ ರಚಿತ ಜೀವನ ಗ್ರಂಥಗಳು

ಕನ್ನಡದ ಶ್ರೇಷ್ಠ ವಿದ್ವಾಂಸರೆನಿಸಿರುವ ಜೀಶಂಪ ಅವರು ತಮ್ಮ ಸಾಹಿತ್ಯ ಜೀವನದಲ್ಲಿ ಈ ಕೆಳಕಂಡ ಆರು ಜೀವನ ಚಿತ್ರದ ಕೃತಿಗಳನ್ನು ರಚಿಸಿದ್ದಾರೆ.

ಗುರುದೇವ ಶ್ರೀ ಚಂದ್ರಶೇಖರನಾಥರು:

ಆದಿಚುಂಚನಗಿರಿ ಕ್ಷೇತ್ರದ ಪೀಠಾಧಿಪತಿಗಳಲ್ಲೊಬ್ಬರಾದ ಶ್ರೀ ಚಂದ್ರಶೇಖರರನ್ನು ಪರಿಚಯಿಸುವ ೩೦ ಪುಟಗಳ ಚಿಕ್ಕ ಕೃತಿ ಇದು. ಇದರಲ್ಲಿ ಒಟ್ಟು ೮ ವಿಭಾಗಗಳಿವೆ. ಮೊದಲನೆಯ ಭಾಗದಲ್ಲಿ ಗುರುವಿನ ಮಹಿಮೆ, ಚುಂಚನಗಿರಿಯ ಹಿರಿಮೆ, 'ಅನ್ನದಾನಿಮಠ'ದ ಮಹಿಮೆಯನ್ನು ಪೀಠಿಕಾರೂಪದಲ್ಲಿ ವರ್ಣಿಸಲಾಗಿದೆ. ಮೂರನೆಯದರಲ್ಲಿ ಶ್ರೀ ಕ್ಷೇತ್ರದ ಗುರುಪರಂಪರೆಯ ಪೌರಾಣಿಕ ಮತ್ತು ಐತಿಹಾಸಿಕ ಮಹತ್ವ, ಚಂದ್ರಶೇಖರರು ಪೀಠಾಧಿಪತಿಗಳಾಗಿ ಮಾಡಿದ ಕಾರ್ಯಸಾಧನೆಯನ್ನು ವಿವರಿಸಾಲಾಗಿದೆ. ನಾಲ್ಕನೆಯದಾಗಿ, ಅಕ್ಕರೆಯ ಶಿಶು, ಎಂಬ ವಿಭಾಗದಲ್ಲಿ ಚಂದ್ರಶೇಖರ ನಾಥರ ಜನನ, ಬಾಲ್ಯ ಜೀವನ, ತಂದೆ-ತಾಯಿಯರು ಮಗುವಿನ ಮೇಲೆ ಹೊಂದಿದ್ದ ಪ್ರೀತಿ ವಾತ್ಸಲ್ಯ, ಚಿಕ್ಕಂದಿನಲ್ಲೇ ಅವರಲ್ಲಿ ಮೊಳೆತ ಚುರುಕುತನ, ಗುರುವಿನ ಬಗೆಗೆ ಚಂದ್ರಶೇಖರರು ಹೊಂದಿದ್ದ ಪ್ರೀತಿ, ಗೌರವದ ಬಗೆಗೆ ತಿಳಿಸಲಾಗಿದೆ. ನಂತರದ ಭಾಗದಲ್ಲಿ ಚಂದ್ರಶೇಖರರ ಶಾಲಾ ಜೀವನ, ಆ ಕಾಲಕ್ಕೆ ಅವರು ರೂಢಿಸಿಕೊಂಡಿದ್ದ ಜೀವನ ಶಿಸ್ತು,ನಿರಾಡಂಬರತ್ವ, ಜಾತ್ಯಾತೀತತೆ, ಸ್ನೇಹಮಯತೆ.

ಆರನೆಯ ಭಾಗದಲ್ಲಿ ಚಂದ್ರಶೇಕರರ ಜೀವನ ವಿಕಾಸ, ಬಿ.ಎಂ.ಶ್ರೀ, ಎಂ.ಆರ್.ಶ್ರೀ, ಎ.ಬಿ.ಮೈ, ಟಿ.ಎಸ್.ವೆಂಕಣ್ಣಯ್ಯ ಇವರುಗಳೊಡನೆ ಹೊಂದಿದ್ದ ಸಂಪರ್ಕ, ಡಿ.ಎಲ್.ಎನ್, ತೀ.ನಂ.ಶ್ರೀ, ಕುವೆಂಪುರವರೊಡನೆ ಹೊಂದಿದ್ದ ಒಡನಾಟ, ಪಠ್ಯೇತರ ಚಟುವಟಿಕೆಗಳಲ್ಲಿ ಅವರ ಪಾತ್ರ ಮುಂತಾದವುಗಳ ಬಗೆಗೆ ವಿವರಗಳಿವೆ. ಉಳಿದ ಎರಡು ಭಾಗಗಳಲ್ಲಿ ಚಂದ್ರಶೇಖರರು ಪೀಠಾರೋಹಣ ಮಾಡಿದನಂತರ ಕೈಕೊಂಡ ಕಾರ್ಯಚಟುವಟಿಕೆಗಳನ್ನು ತಿಳಿಸಲಾಗಿದೆ. ಹೀಗಾಗಿ ಆಧ್ಯಾತ್ಮವ್ಯಕ್ತಿಯೊಬ್ಬರ ಜೀವನ ಚಿತ್ರವನ್ನು ಪರಿಚಯಿಸುವ ಒಂದು ಉತ್ತಮ ಕೃತಿ ಇದಾಗಿದೆ.

ಕಲಾಸಾಧಕ

ಇದು ಜೀಶಂಪ ಅವರು ಬರೆದ ಜೀವನ ಚಿತ್ರಣ ಕೃತಿಗಳಲ್ಲಿ ಸ್ವಲ್ಪ ಉತ್ತಮವೂ, ವಿಸ್ತೃತವೂ ಆದುದಾಗಿದೆ. ಕರ್ನಾಟಕದ ಪ್ರಸಿದ್ಧ ಚಿತ್ರಕಲಾವಿದರಲ್ಲಿ ಒಬ್ಬರಾದ ಪಿ.ಆರ್.ತಿಪ್ಪೇಸ್ವಾಮಿಯವರನ್ನು ಕುರಿತ ಕೃತಿ ಇದಾಗಿದೆ. ಜೀಶಂಪ ಅವರ ಬಾಲ್ಯಸ್ನೇಹಿತರೂ, ನಿಕಟವರ್ತಿಗಳೂ, ಸಹೋದ್ಯೋಗಿಗಳೂ ಆದ ಪಿ.ಆರ್ ತಿಪ್ಪೇಸ್ವಾಮಿಯವರು ಜಾನಪದ ಹಾಗೂ ಲಲಿತಕಲೆಗಳಲ್ಲಿ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡವರು. ಇಂತಹ ಧೀಮಂತ ವ್ಯಕ್ತಿಯನ್ನು ಕುರಿತ ಈ ಪುಸ್ತಕ ಒಟ್ಟು ೫೬ ಪುಟಗಳನ್ನೊಳಗೊಂಡಿದೆ. ಇಲ್ಲಿ ಒಟ್ಟು ೧೩ ವಿಭಾಗಗಳಿವೆ. ಮೊದಲನೆಯ ಭಾಗ 'ಗಂಡು ಮೆಟ್ಟಿದ ನಾಡಿನಿಂದ' ಎಂಬುದರಲ್ಲಿ ಪಿ.ಅರ್.ತಿಪ್ಪೇಸ್ವಾಮಿಯವರು ಹುಟ್ಟಿಬಂದ ಪ್ರದೇಶದ ವಿವರ, ತಮ್ಮ ಪ್ರತಿಭೆಯನ್ನು ರೂಪಿಸಿಕೊಳ್ಳಲು ಅವರು ಪಟ್ಟ

ಶ್ರಮ, ಹಾಗೂ ಅವರು ಮೈಸೂರು ಸೇರಿದ ಬಗೆಗೆ ವಿವರಿಸಲಾಗಿದೆ. ಎರಡನೇ ಭಾಗದಲ್ಲಿ ಅವರಿಗೆ ದೊರೆತ ' ಚಿತ್ರ ಕಲಾಕೋವಿದ' ಬಿರುದಿಗೆ ಅವರಲ್ಲಿದ್ದಿರಬಹುದಾದ ಅರ್ಹತೆ ಎಂಥದ್ದು ಎಂಬುದನ್ನು ವರ್ಣಿಸಲಾಗಿದೆ. ನಂತರದ ಮೂರು ಭಾಗಗಳಲ್ಲಿ ಬೆಳಕಿಗೆ ಬಾರದ ಶ್ರೇಷ್ಠ ನಿಸರ್ಗ ಚಿತ್ರ ಕಲಾವಿದರಾದ ಕೆ.ವೆಂಕಟಪ್ಪ, ಟಂಕಸಾಲಿ, ಎಸ್.ನಂಜುಂಡಸ್ವಾಮಿಯವರುಗಳ ಬಗೆಗೆ, ಯಾವುದೇ ಕಲಾರಂಗಕ್ಕೆ ಅನ್ಯಾಯವಾದರೂ ಅದನ್ನು ಪ್ರತಿಭಟಿಸುತ್ತ ಬಂದ ವಿಚಾರಗಳನ್ನು ತಿಳಿಸಲಾಗಿದೆ.

ನಂತರದ 'ಲೇಖಕ, ವಿಮರ್ಶಕ' ಎಂಬುದರಲ್ಲಿ ಸಾಹಿತಿಯಾಗಿ, ವಿಮರ್ಶಕರಾಗಿ ತಿಪ್ಪೇಸ್ವಾಮಿಯವರು ಮಾಡಿದ ಸಾಹಿತ್ಯ ಸೇವೆಯನ್ನು ವಿವರಿಸಲಾಗಿದೆ. ಮುಂದಿನ 'ಕಲಾಸಿದ್ಧಿ' ಎಂಬ ಭಾಗದಲ್ಲಿ ಮೈಸೂರಿನ ಕನ್ನಡ ಅಧ್ಯಯನ ಸಂಸ್ಥೆಯ ಜಾನಪದ ವಸ್ತು ಸಂಗ್ರಹಾಲಯಕ್ಕೆ ಅವರು ಮಾಡಿದ ಸೇವೆಯನ್ನು, 'ಕಲಾಯಾತ್ರೆ' ಎಂಬುದರಲ್ಲಿ ಭಾರತದ ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ ಸಂಚರಿಸಿ ಸೆರೆಹಿಡಿದಿರುವ ಕಲೆ ಮತ್ತು ಕೈಗೊಂಡ ಯಾತ್ರೆಗಳ ಚಿತ್ರಗಳನ್ನು ಕೊಡಲಾಗಿದೆ. 'ವಿಶಿಷ್ಟ ಅನುಭವಗಳು' ಎಂಬುದರಲ್ಲಿ ಅವರ ಕೆಲವು ಅನುಭವಗಳ ಜೊತೆಗೆ ಅವರ ಅಸಂಖ್ಯಾತ ಕಲಾ ಕೃತಿಗಳು, ಅವುಗಳು ಹಂಚಿಹೋಗಿರುವ ಸ್ಥಳಗಳನ್ನು ತಿಳಿಸಿದ್ದಾರೆ. ಹೀಗೆ ತಿಪ್ಪೇಸ್ವಾಮಿಯವರು ಕಲೆಗಾರ ಮಾತ್ರವಲ್ಲ, ಅವರೊಬ್ಬ ಸಾಹಿತಿ, ವಿಮರ್ಶಕ, ಜಾನಪದ ಕ್ಷೇತ್ರಕಾರ್ಯ ತಜ್ಞ, ಸ್ವಾತಂತ್ರ ಹೋರಾಟಗಾರ. ಕಲಾವಿದರ ಬದುಕು ಹಾಗು ಕಲೆಯನ್ನು ಶ್ರದ್ಧೆಯಿಂದ ಅಭ್ಯಾಸಮಾಡಿಕೊಂಡು ಬಂದವರು: ಹೀಗೆ ಜೀಶಂಪ ಅವರು ತಮ್ಮ ಆತ್ಮೀಯರೊಬ್ಬರ ಬಗೆಗೆ ನೀಡಿರುವ ಈ ಸ್ಪಷ್ಟ ಜೀವನ ಚಿತ್ರಣ, ಕೊನೆಗೂ ತಮ್ಮ ತಮ್ಮ ಕ್ಷೇತ್ರಗಳ ಅಕಾಡೆಮಿ ಅಧ್ಯಕ್ಷರಾಗಿ ಸೇವೆ, ಸಲ್ಲಿಸಿರುವುದನ್ನು ಗಮನಿಸಿದರೆ, ಇದು ಈ ಇಬ್ಬರು ಗೆಳೆಯರ ಶ್ರಮಕ್ಕೆ ದೊರೆತ ಫಲ, ಪ್ರತಿಭೆಗೆ ದೊರೆತ ಪುರಸ್ಕಾರ.

ಉಕ್ಕಿನ ಮನುಷ್ಯ

ಇದು ಮೈಸೂರು ಸಂಸ್ಥಾನದ ವಯಸ್ಕರ ಶಿಕ್ಷಣ ಸಮಿತಿಯಿಂದ ಪ್ರಕಟಗೊಂಡು, ವಯಸ್ಕರ ತರಗತಿಗಳಲ್ಲಿ ಕಲಿತು ವಿದ್ಯಾವಂತರಾದವರು ತಮ್ಮ ಓದನ್ನು ಮುಂದುವರೆಸಲೆಂದು ಬರೆಸಿ ಪ್ರಕಟಿಸಿದ ೨೦ ಪುಟಗಳ ಕಿರುಪುಸ್ತಕ. ಇದರಲ್ಲಿ ಒಟ್ಟು ೫ ವಿಭಾಗಗಳಿವೆ. ಆರಂಭದಲ್ಲಿ ಪಟೇಲರನ್ನು ಪೀಠಿಕಾರೂಪದಲ್ಲಿ ಪರಿಚಯಿಸಿದ್ದಾರೆ. ಮುಂದಿನ ಭಾಗದಲ್ಲಿ ಅವರ ಹುಟ್ಟು, ಬಾಲ್ಯ, ಪಟ್ಟ ಶ್ರಮ, ಬದುಕಿನ ಅನುಭವ, ಅವರ ಚಟುವಟಿಕೆ, ಧೈರ್ಯ ಸಾಹಸ, ಮುಢನಂಬಿಕೆಗಳ ಬಗೆಗೆ ಅವರು ಹೊಂದಿದ್ದ ನಿಲುವುಗಳನ್ನು ತಿಳಿಸಲಾಗಿದೆ. ವಕೀಲರಾಗಿ ಕೀರ್ತಿ ಪಡೆದ ಪಟೇಲರು ತಮ್ಮ ಚುರುಕುತನದಿಂದ ಎಂತಹ ಕಠಿಣ ಸಮಸ್ಯೆಗಳನ್ನು ಸುಲಭವಾಗಿ ಹೇಗೆ ಬಗೆಹರಿಸಿ ಕೊಳ್ಳುತಿದ್ದರೆಂಬುದನ್ನು ಮೂರನೆಯ ಭಾಗದಲ್ಲಿ, ನಾಲ್ಕನೆಯ ಭಾಗದಲ್ಲಿ ಪಟೇಲರ ಹೆಂಡತಿಯ ಸಾವು, ಹಾಗೂ ವಕೀಲ ವೃತ್ತಿಗೆ ರಾಜಿನಾಮೆ ನೀಡಿ ಅಂದಿನ ಸ್ವಾತಂತ್ರ

ಹೋರಾಟದ ಚಳುವಳಿಯಲ್ಲಿ ಗಾಂಧೀಜಿ ಪ್ರಭಾವಕ್ಕೆ ಒಳಗಾಗಿ ಹೋರಾಟ ನಡೆಸಿದ ಬಗೆಗೆ ತಿಳಿಸಲಾಗಿದೆ. ಕೊನೆಯ ಭಾಗದಲ್ಲಿ ಗಾಂಧಿಯವರೊಡನೆ ಅವರು ಹೊಂದಿದ್ದ ಸ್ನೇಹಮಯತೆ ಹಾಗೂ ಪಟೇಲರ ಅಂತ್ಯವನ್ನು ವಿವರಿಸಾಲಾಗಿದೆ. ಹೀಗೆ ವ್ಯಕ್ತಿ ಚಿತ್ರವನ್ನು ಸ್ಪಷ್ಟವಾದ ಮಾಹಿತಿಗಳೊಡನೆ ಸಂಕೀರ್ಣವಾಗಿ ಹಿಡಿದಿಟ್ಟ ಕೃತಿ ಇದಾಗಿದೆ.

ಬೆಳಗೊಳದ ಗೊಮ್ಮಟೇಶ- ಇದೂ ಸಹ ವಯಸ್ಕರ ಶಿಕ್ಷಣ ಸಮಿತಿಯಿಂದ ಪ್ರಕಟಗೊಂಡಿದೆ. ಇದರಲ್ಲಿ ಬಾಹುಬಲಿಯ ಜೀವನ ಚಿತ್ರವನ್ನು ತುಂಬಾ ಸರಳವಾಗಿ ಮತ್ತು ಸುಂದರವಾಗಿ ಚಿತ್ರಿಸಲಾಗಿದೆ. ಇದರಲ್ಲಿ ಒಟ್ಟು ೫ ಭಾಗಗಳಿದ್ದು ಕೃತಿಯ ಶೀರ್ಷಿಕೆಯೇ ಹೇಳುವಂತೆ ಈ ಪುಸ್ತಕ ಶ್ರವಣ ಬೆಳಗೊಳದ ಇಂದ್ರಗಿರಿಯ ತುದಿಯಲ್ಲಿರುವ ಗೊಮ್ಮಟನ ವಿಷಯವನ್ನು ಮಾತ್ರ ಹೇಳದೆ, ಭರತ-ಬಾಹುಬಲಿಯರ ಕತೆ, ಶ್ರವಣ ಬೆಳಗೊಳದ ಪೌರಾಣಿಕ, ಐತಿಹಾಸಿಕ ಮತ್ತು ಭೌಗೋಳಿಕ ಹಿನ್ನೆಲೆ, ವಾಸ್ತು ಶಿಲ್ಪ ಮುಂತಾದವನ್ನು ಕುರಿತಂತೆ ತಿಳಿಸುತ್ತದೆ.

ಮೊದಲ ಭಾಗದಲ್ಲಿ ಆದಿತೀರ್ಥಂಕರರ ವಿಷಯ, ಭರತಬಾಹುಬಲಿ ಜನನ, ಬಾಹುಬಲಿ ಯುದ್ಧ, ವೈರಾಗ್ಯ, ತಪಸ್ಸು ಮಾಡಿದುದರ ಬಗೆಗೆ ವಿವರವಿದೆ. ೨ನೇ ಭಾಗದಲ್ಲಿ ಶ್ರವಣ ಬೆಳಗೊಳದ ಸುತ್ತಿಲಿನ ನಿಸರ್ಗದ ವರ್ಣನೆ, ಭರತ ಮಾಡಿಸಿದ ಬಾಹುಬಲಿಯ ವಿಗ್ರಹವನು ನೋಡಬೇಕೆಂಬ ತಾಯಿಯ ಬಯಕೆ, ಚಾವುಂಡರಾಯನ ಗರ್ವಭಂಗ, ಬಾಹುಬಲಿಗೆ ಮಸ್ತಕಾಭಿಷೇಕ ಮಾಡಿಸಿದ್ದು- ಮುಂತಾದ ವಿಷಯಗಳು ಅಡಕವಾಗಿವೆ.

ಮೂರನೆಯ ಭಾಗದಲ್ಲಿ ಬಾಹುಬಲಿ ಮೂರ್ತಿಗೆ ಗೊಮ್ಮಟೇಶ್ವರ ಎಂಬ ಹೆಸರು ಬಂದ ಬಗೆ, ಗೊಮ್ಮಟಗಿರಿಯ ಬಸದಿಗಳ ಬಗೆಗೆ ವಿವರವಿದೆ. ನಾಲ್ಕನೆಯ ಭಾಗದಲ್ಲಿ ಬಾಹುಬಲಿ ಮೂರ್ತಿಯ ವರ್ಣನೆ ಹಾಗೂ ಕೊನೆಯ ಭಾಗದಲ್ಲಿ ಚಂದ್ರಗಿರಿಯ ಭೌಗೋಳಿಕ, ಚಾರಿತ್ರಿಕ ಮತ್ತು ಪೌರಾಣಿಕ ಹಿನ್ನೆಲೆಗಳ ಜೊತೆಗೆ ಅಲ್ಲಿನ ಸ್ಥಳಗಳು, ಬಸದಿಗಳು, ಕವಿಗಳು ಕಂಡ ಗೊಮ್ಮಟ್ಟೇಶ್ವರ ಇವುಗಳ ವರ್ಣನೆ ಇದೆ.

ಸಾಹಸಯಾತ್ರಿ :

ಜೀಶಂಪ ಅವರು ರಚಿಸಿದ ಮತ್ತೊಂದು ಜೀವನ ಚಿತ್ರ ಸಾಹಸಯಾತ್ರಿ ಕನ್ನಡ ಜನಪದ ಸಾಹಿತ್ಯದ ದಿಗ್ಗಜಗಳಲ್ಲಿ ಒಬ್ಬರಾದ ಕ.ರಾ.ಕೃ. ಅವರನ್ನು ಕುರಿತ ೫೦ ಪುಟಗಳ ಕಿರುಪುಸ್ತಕ. ಜನಪದ ಸಾಹಿತ್ಯ ಸಂಗ್ರಹಣೆಯೇ ಒಂದು ಸಾಹಸದ ಕೆಲಸ, ಅದನ್ನು ಪರಿಷ್ಕರಿಸಿ ಪ್ರಕಟಿಸುವುದು ಇನ್ನೂ ಕಷ್ಟದ ಕೆಲಸ. ಹೀಗಾಗಿ ೧೦ ವರ್ಷಗಳ ಅವಧಿಯಲ್ಲಿ ೨೫ ಕೃತಿಗಳನ್ನು ಸಂಗ್ರಹಿಸಿ, ಸಂಪಾದಿಸಿ, ಪ್ರಕಟಿಸಿದ ಇವರನ್ನು 'He has done a task that many institutions are incapable of turning out and that he has achieved single-handed' ಎಂದು ಡಾ.ಪ್ರಭುಶಂಕರ ಪ್ರಶಂಸಿಸಿದ್ದಾರೆ. ಲೇಖಕರೇ

ಹೇಳುವಂತೆ. "ಇದು ಕ.ರಾ.ಕೃ ಅವರ ಕಥೆ ಮಾತ್ರವಲ್ಲ. ಕನ್ನಡದಲ್ಲಿ ಸಾರ್ವತ್ರಿಕ ಕ್ಷೇತ್ರವೊಂದನ್ನು ತನ್ನ ಬದುಕಿನ ಮುಖ್ಯ ಕಾರ್ಯರಂಗವಾಗಿ ಅವಲಂಬಿಸಿ ನಿಷ್ಠೆಯಿಂದ ದುಡಿಯಲು ಹೊರಡುವ ಯಾವುದೇ ಉತ್ಸಾಹಶಾಲಿಯ ಕಥೆ' ಎಂಬುದು ಅರ್ಥಪೂರ್ಣವಾದ ಮಾತು. ಇದು ಕ.ರಾ.ಕೃ ಅವರ ಜನಪದ ಸಾಹಿತ್ಯರಂಗದ ಹೋರಾಟವನ್ನು, ಅವರು ಸಂಗ್ರಹಿಸಿದ ಸಾಹಿತ್ಯದ ವೈಪುಲ್ಯವನ್ನು, ಅವರು ಎದುರಿಸಲೇಬೇಕಾಗಿಬಂದ ಕಷ್ಟನಿಷ್ಠುರಗಳನ್ನು ಇಲ್ಲಿ ಸೂಕ್ಷ್ಮವಾಗಿ ಪರಿಚಯಿಸಲಾಗಿದೆ. ಅಲ್ಲದೆ ೫೬ ಪುಟಗಳ ಈ ಪುಸ್ತಕದಲ್ಲಿ ಅಲ್ಲಿಯವರೆಗೆ ಪ್ರಕಟವಾಗಿದ್ದ ಅವರ ೨೫ ಕೃತಿಗಳನ್ನು ಆದಿಯಲ್ಲಿ ಪರಿಚಯಿಸಲಾಗಿದೆ. ಈ ಕೆಲವು ಜೀವನ ಚಿತ್ರಗಳನ್ನು ಒಮ್ಮೆ ತಿರುವಿಹಾಕಿದರೆ ಅದರಿಂದ ನಮಗೆ ಅರ್ಥವಾಗುವ ಅಂಶವೆಂದರೆ, ಜೀಶಂಪ ಅವರು ಎಂತಹಾ ಜಟಿಲ ವಿಷಯವನ್ನು ಅತ್ಯಂತ ಸರಳವಾಗಿ, ಸರಳ ನಿರೂಪಣಾ ಶೈಲಿಯಲ್ಲಿ ಸಾಮಾನ್ಯ ಓದುಗನಿಗೂ ಹಿಡಿಸುವ ಹಾಗೆ ಅಡಕಗೊಳಿಸಿ ಬರೆಯುವ ಅವರ ಬರಹ ಕೌಶಲ್ಯ ನಿಜಕ್ಕು ಮೆಚ್ಚುವಂಥದ್ದು.

❋

ಜಾನಪದ ಸಂಶೋಧನ ಕೃತಿಗಳು

ಜನಪದ ಸಾಹಿತ್ಯ ಸಮೀಕ್ಷೆ: ೧೯೬೭ರಲ್ಲಿ ಪ್ರಕಟಗೊಂಡ ಈ ಕೃತಿಯು ಹಲವು ಬಿಡಿ ಲೇಖನಗಳ ಸಂಗ್ರಹವಾಗಿದೆ. 'ಜಾನಪದ' ಪದದ ವ್ಯಾಪ್ತಿಗೆ ಒಳಪಡುವಂತೆ 'ಸಾಹಿತ್ಯ'ದ ಸಂಗ್ರಹ ನಮ್ಮಲ್ಲಿ ಆಗಲಿಲ್ಲವೆಂಬುದರ ಕೊರತೆಯನ್ನು ತಕ್ಕ ಮಟ್ಟಿಗಾದರೂ ತುಂಬುವಲ್ಲಿ ಈ ಕೃತಿ ಸಹಾಯಕವಾಗುತ್ತದೆಂಬುದು ಲೇಖಕರ ಅಭಿಪ್ರಾಯ. ೧೯೫೪ರಿಂದ ೧೯೬೭ರವರೆಗೆ ಬರೆದ ವಿಶ್ಲೇಷಣೆ, ವಿಮರ್ಶೆ, ಸಂಶೋಧನೆ, ಪರಿಭಾವನೆ-ಎಂಬ ಯಾವ ಶೀರ್ಷಿಕೆಯ ಕೆಳಗೂ ಇದನ್ನು ಸೇರಿಸದೆ, ಜನಪದ ಶ್ರೀಯನ್ನು ಲೇಖಕರು ಆನಂದಿಸಿ, ಕಂಡುಂಡ ಅನುಭವಗಳ ಲೇಖನಗಳು ಈ ಸಂಕಲನದಲ್ಲಿ ಮೈದುಂಬಿಕೊಂಡಿವೆ.

'ಜನಪದ ಸಾಹಿತ್ಯ ಸಮೀಕ್ಷೆ' ಜೀಶಂಪ ಅವರ ಆಳವಾದ ಅಭ್ಯಾಸ, ಪರಿಶ್ರಮ ಹಾಗೂ ಪಕ್ವಾನುಭವದ ಸುಂದರ ಫಲ. ಜನಪದ ಸಾಹಿತ್ಯದ ವಿವಿಧ ಮುಖಗಳನ್ನು ಕುರಿತ ಹದಿನೆಂಟು ಲೇಖನಗಳನ್ನು ಒಳಗೊಂಡಿದೆ.ಕಂಸಾಳೆಯ ಹಾಡುಗಳು ಮತ್ತು ಕರಪಾಲದ ಮೇಳಗಳ ಸ್ವರೂಪ ಲಕ್ಷಣಗಳನ್ನು ವಿವರಿಸಿ, ಅವುಗಳ ವೈಶಿಷ್ಟ್ಯವನ್ನು ಹೇಳಲಾಗಿದೆ ಹಾಗೂ ಅವುಗಳು ಪ್ರಚಾರದಲ್ಲಿರುವ ಪ್ರದೇಶವನ್ನು ಗುರುತಿಸಿದ್ದಾರೆ. ಅಲ್ಲದೆ ಜನಪದ ಸಾಹಿತ್ಯದಲ್ಲಿ ಹಾಸ್ಯದ ಹುಲುಸಾದ ಬೆಳವಣಿಗೆಯನ್ನು ಹಲವಾರು ನಿದರ್ಶನಗಳೊಂದಿಗೆ ತೋರಿಸಿದ್ದಾರೆ. ಹೀಗೆಯೆ ಹಳ್ಳಿಯ ಹಬ್ಬಗಳ ವಿವರ, ಹೆಣ್ಣಿನ ತೌರೂರಿನ ಆಸೆನಿರಾಸೆಗಳು. ಮುಗ್ಧ ಭಕ್ತಿಯ ಬುಗ್ಗೆಯಾಗಿ ಹರಿದಿದೆ. ಕೊನೆಯಲ್ಲಿ ಜನಪದ ಕಲೆಗಳ ಸಂಗ್ರಹ, ಸಂರಕ್ಷಣೆಯನ್ನು ಕುರಿತಂತೆ ಮೂರು ಲೇಖನಗಳೊಡನೆ ಈ ಗ್ರಂಥ ಪರಿಸಮಾಪ್ತಿಗೊಳ್ಳುತ್ತದೆ. ಇಲ್ಲಿನ ಲೇಖನಗಳು ಲೇಖಕರ ಸೂಕ್ಷ್ಮಸಂವೇದನೆ ಹಾಗೂ ಸೌಂದರ್ಯ ಪ್ರಜ್ಞೆಯ ದ್ಯೋತಕವಾಗಿದೆ.

ಜಾನಪದ

ಡಾ.ಜೀಶಂಪರವರ 'ಜಾನಪದ' ಕೃತಿಯು, ಹೆಸರೇ ಸೂಚಿಸುವಂತೆ ಜಾನಪದ ಪರಿಕಲ್ಪನೆಯನ್ನು ಸ್ಪಷ್ಟಪಡಿಸುವಲ್ಲಿ ಸಹಕಾರಿಯಾಗಿದೆ. ಅಲ್ಲದೆ ಜಾನಪದ ಸಂಗ್ರಹ, ಸಂಶೋಧನೆ ಹಾಗೂ ಅದರ ಲಕ್ಷಣಗಳು, ವಿವಿಧ ವಿದ್ವಾಂಸರ ಅಭಿಪ್ರಾಯಗಳು,

ಜಾನಪದ ಸ್ವರೂಪ, ಪ್ರಕಾರಗಳು, ವರ್ಗೀಕರಣ, ವ್ಯಾಪ್ತಿ, ಸಿದ್ಧಾಂತಗಳ ವಿಶ್ಲೇಷಣೆ ಮುಂತಾದ ಹಲವು ವಿಷಯಗಳನ್ನು ಪಾಶ್ಚಾತ್ಯ ವಿದ್ವಾಂಸರು ನಡೆಸಿರುವ ಅಧ್ಯಯನಗಳ ಉದಾಹರಣೆಗಳೊಡನೆ ಹೋಲಿಸಿ, ದೇಶಿ ಜಾನಪದ ಅಧ್ಯಯನದ ಓರೆಕೋರೆಗಳನ್ನು ಮುಂದೆ ಆಗಬೇಕಾದ ಕೆಲಸಗಳನ್ನು ಸೂಚಿಸುವ ಪ್ರಯತ್ನ ಮಾಡಿದ್ದಾರೆ. 'ವಸ್ತುಸಂಗ್ರಹಾಲಯ ಎಂಬ ಲೇಖನದಲ್ಲಿ ಜಾನಪದ ಸಂಗ್ರಹಣೆಯಲ್ಲಿ ಸಾಹಿತ್ಯ ಸಂಗ್ರಹದಷ್ಟೇ ಪ್ರಮುಖವಾದುದು ವಸ್ತು ವಿಶೇಷಗಳ ಸಂಗ್ರಹ ಎಂದು ಅಭಿಪ್ರಾಯ ಪಡುತ್ತಾರೆ. 'ನಗರಜಾನಪದ'ದ ಬಗೆಗೆ ನಮ್ಮಲ್ಲಿನ ಅಧ್ಯಯನ ಅವಶ್ಯಕತೆಯ ಬಗೆಗೆ ಅನೇಕ ಉದಾಹರಣೆಗಳೊಂದಿಗೆ ಚರ್ಚಿಸಿದ್ದಾರೆ. ಹೀಗೆ ಜಾನಪದದ ಹೊಸ ನೆಲೆಗಳನ್ನು ವೈಜ್ಞಾನಿಕ ಅಧ್ಯಯನ ಕ್ರಮಕ್ಕೆ ಬಳಸಿಕೊಂಡು ಅಧ್ಯಯನ ಮಾಡುವವರಿಗೆ ಇದೊಂದು ಉತ್ತಮ ಕೃತಿಯಾಗಿ ಸಹಾಯಕವಾಗಬಲ್ಲುದು.

'ನಮ್ಮ ಜನಪದ ಕಲೆಗಳು' ಮತ್ತು 'ನಮ್ಮ ಜನಪದ ಸಾಹಿತ್ಯ' ಕೃತಿಗಳು ಜನಪದ ಜನಪದ ಸಾಹಿತ್ಯ ಮತ್ತು ಕಲೆಯ ಸ್ವಾರಸ್ಯವನ್ನು ವಿವರಿಸುವ ಪುಟ್ಟ ಕೃತಿಗಳಾಗಿವೆ. ಅಲ್ಲದೆ ಐ.ಬಿ.ಎಚ್. ಪ್ರಕಾಶನದವರು ಪ್ರಕಟಿಸಿರುವ 'ಕಿನ್ನರ ಜೋಗಿ ಮೇಳ','ಜನಪದ ವಾದ್ಯಗಳು', 'ಹೆಂಗಸರ ಜನಪದ ಗೀತೆಗಳು', 'ಗಂಡಸರ ಜನಪದ ಗೀತೆಗಳು', 'ದೊಂಬಿದಾಸರ ಮೇಳ', 'ಮೈಲಾರನ ಗೊರವರು', 'ಕಂಸಾಳೆಯವರು' ಇತ್ಯಾದಿ ಕೃತಿಗಳು ಒಂದೊಂದು ಕಲೆಯ ಜಾಡನ್ನು ಸಂಪೂರ್ಣವಾಗಿ ವಿವರಿಸುವ ಕೃತಿಗಳಾಗಿವೆ.

ಜಾನಪದ ಸಂಗಮ:

ಈ ಕೃತಿಯಲ್ಲಿ ಒಟ್ಟು ಹನ್ನೊಂದು ಲೇಖನಗಳಿದ್ದು ಇವುಗಳೆಲ್ಲವೂ ಬೇರೆ ಬೇರೆ ಜಾನಪದ ಕೃತಿಗಳಿಗೆ ಬರೆದ ಮುನ್ನುಡಿಗಳು ಹಾಗೂ ಪ್ರಸ್ತಾವನೆಗಳಾಗಿವೆ. ಜನಪದಗದ್ಯ ಕಥೆಗಳು, ಜನಪದ ಸಂಪ್ರದಾಯಗಳು, ಜನಪದ ಕಥೆಗಳು-ಈ ಕೃತಿಯಲ್ಲಿನ ಉಳಿದ ಲೇಖನಗಳಿಗಿಂತ ಸಾಕಷ್ಟು ದೀರ್ಘವಾಗಿ ಚರ್ಚೆಗೊಂಡಿವೆ. ಹೀಗಾಗಿ ಇವುಗಳು ಸಮಕಾಲೀನ ಜನಪದ ಕಥೆಗಳ ಏಕಮುಖಿ ಅಧ್ಯಯನದ ಕ್ರಮಗಳನ್ನು ಅಳಿಸಿ, ಅವುಗಳು ಹುಟ್ಟಿಕೊಂಡ ಪರಿಸರ, ಅದರ ಹಿನ್ನೆಲೆ ,ವಸ್ತು ರಚನಾ ಕ್ರಮಗಳನ್ನು ಆಧರಿಸಿ ಇವು ಕೇವಲ ಕಾಲಹರಣದ ಅಥವಾ ಮನರಂಜನಾ ಮಾಧ್ಯಮ ಮಾತ್ರವಲ್ಲ ಇವು ಒಂದು ವಿಶಿಷ್ಟ ಬದುಕಿನ ಹಿನ್ನೆಲೆಯನ್ನೊಳಗೊಂಡು ಬೆಳೆದು ಬಂದಂತಹವುಗಳೆಂಬುದನ್ನು ಸ್ಪಷ್ಟಪಡಿಸಿದ್ದಾರೆ. ಸಂಪ್ರದಾಯಗಳು ಕೇವಲ ಕಂದಾಚಾರಗಳಾಗಿರದೆ, ಮಾನವನ ಸಾಮಾಜಿಕ ಹಾಗೂ ಸಾಂಸ್ಕೃತಿಕ ಬದುಕಿನಲ್ಲಿ ಹೇಗೆ ಜೀವಂತ ಸಂಬಂಧ ಪಡೆದುಕೊಂಡು ಬಂದಿವೆ? ಹಾಗೂ ಸಂಸ್ಕೃತಿಯ ಅಧ್ಯಯನದ ಸಂದರ್ಭದಲ್ಲಿ ಹೇಗೆ ಪಾತ್ರವಹಿಸುತ್ತವೆ? ಎಂಬುದನ್ನು ಅನೇಕ ಉದಾಹರಣೆಗಳ ಮೂಲಕ ಚರ್ಚಿಸಿದ್ದಾರೆ. ಉಳಿದ ಲೇಖನಗಳಾದ ಕೋಲಾಟ, ಭಾಗವಂತಿಕೆ ಮೇಳ ಮುಂತಾದವುಗಳಲ್ಲಿ ಆಯಾ ಕಲೆಗಳ ಹುಟ್ಟು, ಬೆಳವಣಿಗೆ, ಪ್ರಾದೇಶಿಕ ಭಿನ್ನತೆ-ಅಲ್ಲದೆ ಅವುಗಳ ಕಥಾ ಸಾಹಿತ್ಯದ ವೈಶಿಷ್ಟ್ಯತೆಯನ್ನು

ತಿಳಿಸಿದ್ದಾರೆ. ಹೀಗಾಗಿ ಈ ಕೃತಿ ಜಾನಪದ ಅಧ್ಯಯನಕಾರರಿಗೆ ಹಾಗೂ ವಿಷಯಾಸಕ್ತರಿಗೆ ಒಂದು ಉಪಯುಕ್ತ ಕೃತಿಯಾಗಿದೆ.

ಜಾನಪದ: ಕೆಲವು ಮುಖಗಳು

ಇದು ಜೀಶಂಪ ಅವರು ಬೇರೆ ಬೇರೆ ಸಂದರ್ಭಗಳಲ್ಲಿ ಬರೆದು ಪ್ರಕಟಿಸಿದ ಲೇಖನಗಳನ್ನೊಳಗೊಂಡ ಕೃತಿ. ಇಲ್ಲಿ ಸಂಶೋಧನಾತ್ಮಕ, ಪರಿಚಯಾತ್ಮಕ, ಪರಿಶೀಲನಾತ್ಮಕ ಲೇಖನಗಳು ಸೇರಿವೆ. ಹೀಗಾಗಿ ಇವುಗಳನ್ನು ವಿವೇಚನೆ, ಪರಿವೀಕ್ಷಣೆ, ಸಮೀಕ್ಷೆ- ಎಂಬ ಮೂರು ಹಂತಗಳಲ್ಲಿ ವಿಭಜಿಸಿಕೊಳ್ಳಲಾಗಿದೆ. ವಿವೇಚನೆಯ ಭಾಗದಲ್ಲಿ ಮೂರು ಲೇಕನಗಳಿದ್ದು, ಜಾನಪದ ಮತ್ತು ಪೂರಕ ವಿಜ್ಞಾನಗಳ ಅನ್ವಯಿಕ ದೃಷ್ಟಿ ಹಾಗೂ ಪರಸ್ಪರ ಪೂರಕ ಸಂಬಂಧಗಳನ್ನು ಸೂಕ್ಷ್ಮವಾಗಿ ಹೇಳಲಾಗಿದೆ. 'ಜಾನಪದ ಅಧ್ಯಯನದ ನೆಲೆ-ಬೆಲೆ' ಎಂಬ ಲೇಖನದಲ್ಲಿ ವೈಜ್ಞಾನಿಕತೆಯ ಪ್ರಭಾವದಿಂದ ಕಣ್ಮರೆಯಾಗುತ್ತಿರುವ ಜನಪದ ಕಲೆಗಳು, ಸಾಹಿತ್ಯ ಹಾಗೂ ಸಂಪ್ರದಾಯಗಳನ್ನು ಸಂರಕ್ಷಿಸಿ ಸಂಪಾದಿಸಬೇಕೆಂಬ ಕಾಳಜಿಯ ಬಗೆಗೆ ಲೇಖಕರು ಒತ್ತಿ ಹೇಳಿದ್ದಾರೆ. 'ಜನಪದ ಕಥೆಗಳು', ಲೇಖನ ಆಕಾಶವಾಣಿಯಲ್ಲಿನ ಭಾಷಣಕ್ಕಾಗಿ ಬರೆದ ಜನಪದ ಕಥೆಯ ಪ್ರಕಾರಗಳನ್ನು ಕುರಿತ ಪರಿಚಯಾತ್ಮಕ ಲೇಖನ ರೂಪವಾಗಿದೆ.

ಪರಿವೀಕ್ಷಣೆಯ ವಿಭಾಗದಲ್ಲಿನ ಒಟ್ಟು ೧೦ ಲೇಖನಗಳು ಉತ್ತಮ ಕ್ಷೇತ್ರ ಕಾರ್ಯಾನುಭವದ ಹಿನ್ನೆಲೆಯಲ್ಲಿ ರೂಪುಗೊಂಡ ವಿದ್ವತ್ಪೂರ್ಣ ಲೇಖನಗಳಾಗಿವೆ. 'ಕರ್ನಾಟಕ ಜನಪದ ನೃತ್ಯಗಳು' ಎಂಬ ಲೇಖನದಲ್ಲಿ ಕರ್ನಾಟಕದ ಜನಪದ ನೃತ್ಯಗಳ ಸಂದರ್ಭದಲ್ಲಿ ಅವುಗಳನ್ನು ಅಧ್ಯಯನ ಅನುಕೂಲದ ದೃಷ್ಟಿಯಿಂದ ಪ್ರಾದೇಶಿಕ ಭಿನ್ನತೆಯ ಆಧಾರದ ಮೇಲೆ ವರ್ಗೀಕರಿಸಲಾಗಿದೆ. ಅಲ್ಲದೆ ಕೆಲವು ಕಲೆಗಳ ಬೆಳವಣಿಗೆಗೆ ಆಯಾ ಪ್ರದೇಶದ ಪ್ರೋತ್ಸಾಹ, ಪ್ರೇರಣೆಗಳನ್ನು ಗುರುತಿಸಿದ್ದಾರೆ. ಜೊತೆಗೆ ಕಲೆಗಳನ್ನು ಧಾರ್ಮಿಕ ಹಾಗೂ ಲೌಕಿಕವೆಂದು ವಿಭಾಗಿಸಿ ಇವೆರಡರ ಅಂತಃಸತ್ವವನ್ನೂ, ವೈವಿಧ್ಯತೆಗಳನ್ನು ಸ್ಪಷ್ಟಪಡಿಸಿದ್ದಾರೆ. 'ಕರ್ನಾಟಕದ ತೊಗಲು ಗೊಂಬೆಯಾಟ' ಲೇಖನದಲ್ಲಿ ಗೊಂಬೆರಾಮರ ಬದುಕು ಮತ್ತು ಕಲೆಯ ಬಗೆಗೆ ಸ್ಪಷ್ಟ ಚಿತ್ರಣ ನೀಡಿದ್ದಾರೆ. ಜೊತೆಗೆ ಅಳಿಯುತ್ತಿರುವ ಈ ಕಲೆ ಹಾಗೂ ಕಲಾವಿದರ ಬಗೆಗೆ ಆತಂಕ ವ್ಯಕ್ತಪಡಿಸಿದ್ದಾರೆ. ಕರ್ನಾಟಕ ಜನಪದ ಕಲೆಗಳ ಗುಂಪಿನಲ್ಲಿ ತನ್ನ ಪ್ರಾದೇಶಿಕ ಹಿನ್ನೆಲೆಯಿಂದಾಗಿ ವೈಶಿಷ್ಟ್ಯಪೂರ್ಣ ಜನಪದ ಕಲೆಗಳನ್ನು ಹೊಂದಿರುವ ದಕ್ಷಿಣ ಕನ್ನಡ ಜಿಲ್ಲೆಯ ಅಪ್ರತಿಮ ಕಲಾವಿದರು ಹಾಗೂ ಇಲ್ಲಿನ ಪ್ರಾದೇಶಿಕ ಜನಪದ ಕಲೆಗಳ ಅಧ್ಯಯನ ಕೇಂದ್ರಗಳ ಬಗೆಗೆ ವಿವರಿಸಿದ್ದಾರೆ. 'ಜಾನಪದ ವಸ್ತು ಸಂಗ್ರಹಾಲಯ' ಲೇಖನದಲ್ಲಿ ಅವುಗಳ ಮಹತ್ವ ಹಾಗೂ ಮೈಸೂರು ವಿಶ್ವವಿದ್ಯಾಲಯ ಜಾನಪದ ವಸ್ತು ಸಂಗ್ರಹಾಲಯದ ಬಗೆಗೆ ವಿವರಿಸಾಲಾಗಿದೆ. ಕಾರಂತರು ಹಾಗೂ ಗೊರೂರರು ಜಾನಪದ ಕ್ಷೇತ್ರಕ್ಕೆ ನೀಡಿದ ಕೊಡುಗೆ ಹಾಗೂ ಅವರು ಅದರೊಂದಿಗೇ ತಮ್ಮನ್ನು ತೊಡಗಿಸಿಕೊಂಡ ಕ್ರಮದ ಬಗೆಗೆ ತಿಳಿಸಲಾಗಿದೆ.

'ತಮಿಳುನಾಡಿನ ಜನಪದ ಕಲೆ' ಎಂಬ ಲೇಖನವು 'ಇಂಡಿಯ ರಿಕನ್‌ಸ್ಟ್ರಕ್ಟ್ ' ಪತ್ರಿಕೆಯಲ್ಲಿ ಶ್ರೀ ಬಿ.ಸಿ.ಈಶ್ವರದಾಸರು ಬರೆದ 'ಫೋಕ್ ಆರ್ಟ್ಸ್ ಆಫ್ ತಮಿಳ್‌ನಾಡು' ಎಂಬ ಲೇಖನದ ಸಾರಸಂಗ್ರಹವಾಗಿದ್ದು ಕನ್ನಡಕ್ಕೆ ಅದನ್ನು ಭಾಷಾಂತರಿಸುವ ಮೂಲಕ ನೆರೆರಾಜ್ಯದ ಕಲೆಯನ್ನು ನಮಗೆ ಪರಿಚಯಿಸಿಕೊಟ್ಟಿದ್ದಾರೆ.

'ಜಾನಪದ ಸಮೀಕ್ಷೆ' ವಿಭಾಗದಲ್ಲಿ ನಮ್ಮ ಜಾನಪದ ಅಧ್ಯಯನ ಸ್ವಾತಂತ್ರಪೂರ್ವ, ಸ್ವಾತಂತ್ರ್ಯೋತ್ತರ- ಎಂಬ ಎರಡು ಉಪ ವಿಭಾಗಗಳಲ್ಲಿ ದೇಶೀಯ ಮತ್ತು ಪಾಶ್ಚಾತ್ಯ ವಿದ್ವಾಂಸರು ನಮ್ಮ ಜಾನಪದ ಅಧ್ಯಯನದಲ್ಲಿ ನಡೆಸಿದ ಸಂಗ್ರಹ ಹಾಗೂ ಅಧ್ಯಯನಗಳ ಬಗೆಗೆ ಸ್ಪಷ್ಟವಾದ ಸಮೀಕ್ಷಾವರದಿ ದೊರಕುತ್ತದೆ. 'ನಮ್ಮ ಜಾನಪದ ಅಧ್ಯಯನ : ಹೊಸ ತಿರುವು' ಎಂಬ ಲೇಖನದಲ್ಲಿ ಸಮಕಾಲೀನ ಜಾನಪದ ಅಧ್ಯಯನದಲ್ಲಿ ಉಂಟಾದ ಬದಲಾವಣೆಗಳು ಹಾಗೂ ವೈಜ್ಞಾನಿಕ ಅಧ್ಯಯನದ ರೂಪರೇಖೆಗಳ ಬಗೆಗೆ ತಿಳಿಸಿದ್ದಾರೆ. ಹೀಗಾಗಿ ಈ ಕೃತಿಯು ಕನ್ನಡ ಜಾನಪದ ವೈಜ್ಞಾನಿಕ ಅಧ್ಯಯನದ ಕೊಡುಗೆ ಎಂದೇ ಹೇಳಬಹುದಾಗಿದೆ.

ಜನಪದ ಕಲಾವಿಹಾರ

೧೯೮೮ ರಲ್ಲಿ ಮಿಂಚಿನ ಬಳ್ಳಿ ಗ್ರಂಥಮಾಲೆಯಿಂದ ಪ್ರಕಟಗೊಂಡ ಈ ಕೃತಿಯು ಜನಪದ ಕಲೆಗಳನ್ನು ಕುರಿತಂತೆ ಜೀಶಂಪ ಅವರು ನೀಡಿದ ಉಪನ್ಯಾಸ, ಬರೆದ ಟಿಪ್ಪಣಿಗಳ ಒಟ್ಟು ೧೦ ಪ್ರಬಂಧಗಳ ಒಂದು ಸಂಕಲನ. ಕರ್ನಾಟಕ ಜಾನಪದ ಅಧ್ಯಯನದ ಭೀಷ್ಮರೆನಿಸಿದ ಡಾ. ಗೊರೂರು ರಾಮಸ್ವಾಮಿ ಅಯ್ಯಂಗಾರ್‌ರವರಿಗೆ ಈ ಕೃತಿಯನ್ನು ಅರ್ಪಿಸಲಾಗಿದೆ. ಇಲ್ಲಿರುವ ಲೇಖನಗಳೆಲ್ಲ ನಮ್ಮ ಜನಪದ ಕಲೆಗಳ ವೈವಿಧ್ಯವನ್ನು ಪರಿಚಯಿಸುವತ್ತ ಮಾಡಿದ ಪ್ರಯತ್ನಗಳಾಗಿವೆ. 'ಕರ್ನಾಟಕ ಜಾನಪದ ಮತ್ತು ಸಾಂಪ್ರದಾಯಿಕ ಕಲೆಗಳು' ಈ ಸಂಕಲನದ ಮೊದಲ ಲೇಖನ. ನಮ್ಮ ಸಂಸ್ಕೃತಿಯ ನೈಜ ಬೇರು ಬಿಳಲುಗಳನ್ನು ಗುರುತಿಸುವ ಇಲ್ಲಿನ ಕಾರ್ಯ ಶ್ಲಾಘನೀಯ. ಕಣ್ಮರೆಯಾದ ಕೀಲುಗೊಂಬೆಯಾಟ, 'ಮೂಡಲಪಾಯ ಕೆಲವು ವಿಚಾರಗಳು' 'ಘಟ್ಟದ ಕೋರೆ- ಒಂದು ವಿಶಿಷ್ಟ ಯಕ್ಷಗಾನ ಕಲೆ' ಇವು ನಮ್ಮ ಯಕ್ಷಗಾನ ಕಲೆಯ ವಿವಿಧ ನಿಟ್ಟು ನಿಲುವುಗಳನ್ನು ವಿವರಿಸುವ ಲೇಖನಗಳು. ಈ ಲೇಖನದಲ್ಲಿ ಕೀಲುಗೊಂಬೆಯಾಟದ ರಂಗಕ್ಷೇತ್ರದ ವಿವರಣೆ ಇದೆ ಹಾಗೂ ಮೂರು ಬಗೆಯ ಗೊಂಬೆಯಾಟಗಳ ಪರಸ್ಪರ ಸಂಬಂಧವನ್ನು ವಿವೇಚಿಸಲಾಗಿದೆ. 'ಮೂಡಲಪಾಯ ಕೆಲವು ವಿಚಾರಗಳು' ಮತ್ತು 'ಘಟ್ಟದಕೋರೆ - ಒಂದು ವಿಶಿಷ್ಟ ಯಕ್ಷಗಾನ ಕಲೆ' ಎಂಬ ಲೇಖನಗಳಲ್ಲಿ ಎರಡೂ ಯಕ್ಷಗಾನ ಸಂಪ್ರದಾಯಗಳ ವಿವಿಧ ಮುಖಗಳನ್ನು ಕುರಿತು ವಿವೇಚಿಸಲಾಗಿದೆ. 'ಕಾವ್ಯ ಕಲೆಯ ಚಾರಣರು' ಎಂಬ ಲೇಖನ ಕಲಾವಿದರ ವೈವಿಧ್ಯಮಯವಾದ ಬದುಕನ್ನು ಪರಿಚಯಿಸುತ್ತದೆ. ದಕ್ಷಿಣ ಕರ್ನಾಟಕದ ಜನಪದ ವೃತ್ತಿಗಾಯಕ ಕಾವ್ಯಗಳನ್ನು ಕುರಿತು ಇಲ್ಲಿ ವಿವರವಾಗಿ ಚರ್ಚಿಸಲಾಗಿದೆ. ವೃತ್ತಿಗಾಯಕರನ್ನು ವಿಭಾಗಗಳಾಗಿ ವರ್ಗೀಕರಿಸಿ

ಪ್ರತಿಯೊಂದು ವರ್ಗದ ಮಹತ್ವ, ಅವರ ಧಾರ್ಮಿಕ ಮತ್ತು ಸಾಮಾಜಿಕ ಮೌಲ್ಯಗಳನ್ನು ವಿಶ್ಲೇಷಿಸಲಾಗಿದೆ. 'ಮನೆಬಳಕೆಯ ವಸ್ತುಗಳಲ್ಲಿ ಕಲಾತ್ಮಕತೆ' ಇದೊಂದು ಅಪೂರ್ವ ಲೇಖನ. ಜೀಶಂಪ ಅವರು ಜಾನಪದ ಅಧ್ಯಯನದಲ್ಲಿ ಹೊಂದಿರುವ ಸೂಕ್ಷ್ಮ ಅಧ್ಯಯನ ದೃಷ್ಟಿಯನ್ನು ಇಲ್ಲಿ ಮನಗಾಣಬಹುದಾಗಿದೆ. ಅಲ್ಲದೆ ಈ ಕೃತಿಯ ಜನಪದ ಕಲಾಸಕ್ತರಿಗೆ ಒಂದು ಉತ್ತಮ ಮಾರ್ಗದರ್ಶಿಯಾಗಬಲ್ಲದು.

❋

ದಕ್ಷಿಣ ಕರ್ನಾಟಕದ ಜನಪದ ಕಾವ್ಯ ಪ್ರಕಾರಗಳು

ಕನ್ನಡ ಜಾನಪದ ಅಧ್ಯಯನ ಒಂದು ಸ್ವರೂಪವನ್ನು ಪಡೆದುಕೊಳ್ಳುವ ಮೊದಲಿಗೆ ಹೊರಬಂದ ಸಂಶೋಧನ ಪ್ರಬಂಧಗಳಲ್ಲಿ ಡಾ. ಗದ್ದಗಿ ಮಠ ಅವರ 'ಕನ್ನಡ ಜಾನಪದ ಗೀತೆಗಳು' ಒಂದು ಮೈಲಿಗಲ್ಲಾದರೆ, ಅನಂತರ ಬಂದ ಜೀ.ಶಂ. ಪರಮಶಿವಯ್ಯನವರ "ದಕ್ಷಿಣ ಕರ್ನಾಟಕದ ಜನಪದ ಕಾವ್ಯ ಪ್ರಕಾರಗಳು" ಒಂದು ಮಹತ್ವದ ಸಂಶೋಧನಾ ಪ್ರಬಂಧ. ಜೀಶಂಪ ಅವರ ಈ ಸಂಶೋಧನಾ ಪ್ರಬಂಧ ಪ್ರಕಟಗೊಂಡದ್ದು ೧೯೭೯ರ ರಲ್ಲಾದರೂ ಅವರು ಈ ವಿಷಯದ ಬಗೆಗೆ ಸಂಶೋಧನೆ ಕೈಗೊಂಡದ್ದು ೧೯೬೪ ರಲ್ಲಿ. ಇಷ್ಟಾದರೂ ಅವರ ಸಂಶೋಧನೆ ೧೯೬೬ರಲ್ಲಿ ಒಂದು ನಿರ್ದಿಷ್ಟ ಸ್ವರೂಪದಲ್ಲಿ ಮುಂದುವರೆಯಲು ಸಾಧ್ಯವಾಯಿತು. ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆ ಜಾನಪದ ಈ ಅಂಶವನ್ನು ಗಮನಿಸುವಾಗ, ವಿಷಯವೊಂದರ ನಿಜವಾದ ಶೋಧನೆ ಆರಂಭವಾಗುವುದು, ಅದಕ್ಕೆ ಅಧ್ಯಯನ ಅವಕಾಶ ದೊರೆತಾಗ ಮಾತ್ರ ಎನ್ನಬಹುದು. ಅಂತರರಾಷ್ಟ್ರೀಯ ಜಾನಪದ ಅಧ್ಯಯನದ ಧೋರಣೆಗಳನ್ನು ತಮ್ಮ ಅಧ್ಯಯನಕ್ಕೆ ಅಳವಡಿಸಿಕೊಂಡು, ದೇಶೀಯವಾದ ಸ್ವಂತ ಧೋರಣೆಗಳನ್ನು ರೂಪಿಸಿಕೊಂಡು ಮಾಡಿದ ತಲಸ್ಪರ್ಶಿ ಅಧ್ಯಯನದ ಸಾರ್ಥಕ ಫಲ ಅವರ ಈ ಮಹಾಪ್ರಬಂಧ. ಒಟ್ಟು ೧೪ ಭಾಗಗಳನ್ನು ಹೊಂದಿರುವ ಈ ಮಹಾಪ್ರಬಂಧ ಗಾತ್ರದಲ್ಲಿ ಬೃಹತ್ತಾಗಿರುವಂತೆ, ಪಾತ್ರದಲ್ಲಿ ಉನ್ನತವಾಗಿದೆ. ಜಾನಪದ ಸ್ವರೂಪ ಕುರಿತ ಪೀಠಿಕೆಯ ಭಾಗದ ೯ ಉಪವಿಭಾಗಗಳ ಪಾಶ್ಚಾತ್ಯ ಪೌರ್ವಾತ್ಯ ವಿದ್ವಾಂಸರುಗಳ ಜಾನಪದ ಸಂಬಂಧವಾದ ವಿಚಾರಗಳನ್ನು ತಮ್ಮ ವಿಚಾರ ಧಾರೆಯೊಂದಿಗೆ ಮೂಡಿಸಿದ್ದರೆ. ಜೊತೆಗೆ ಕನ್ನಡ ಜಾನಪದ ಅಧ್ಯಯನ ಆರಂಭಗೊಂಡು ಬೆಳೆದುಬಂದ ದಾರಿಯನ್ನು ಗುರುತಿಸಿದ್ದಾರೆ.

ಎರಡನೆಯ ಭಾಗ ಕಥನಕಾವ್ಯ, ಲಾವಣಿಗಳ ಸ್ವರೂಪ, ಖಂಡ ಕಾವ್ಯ ಇತ್ಯಾದಿಗಳ ಸುದೀರ್ಘ ಚರ್ಚೆ, ಕಥೋಪಜೀವಿಗಳು ಅಥವಾ ವೃತ್ತಿಗಾಯಕರ ಬಗೆಗೆ ವಿವರಣೆ ಹೀಗೆ ವ್ಯಾಪಕವಾದ ಸಂಶೋಧನೆ ಮತ್ತು ಅಧ್ಯಯನವನ್ನು ಇಲ್ಲಿ ಕಾಣಬಹುದು. ಮೂರನೆಯ ಭಾಗದಲ್ಲಿ "ದಕ್ಷಿಣ ಕರ್ನಾಟಕದ ಕಾವ್ಯ ಸಂಪ್ರದಾಯಗಳ" ವಿವರಣೆ ಇದೆ. ಅಲ್ಲಿ ಕಂಡುಬರುವ ವೃತ್ತಿಗಾಯಕರು, ಅವರ ವರ್ಗೀಕರಣ, ಸ್ವಾತಂತ್ರಪೂರ್ವ ಮತ್ತು ಸ್ವಾಂತ್ರೋತ್ತರ ಕಾಲಗಳಲ್ಲಿ ಈ ವೃತ್ತಿಗಾಯಕರ ಬಗೆಗೆ ನಡೆದಿರುವ ಸಂಶೋಧನೆ ಹಾಗೂ ವ್ಯಾಪಕ ನಿರೂಪಣೆ ಇದೆ. ಕರ್ನಾಟಕದ ಜನಪದ ವೃತ್ತಿಗಾಯಕರನ್ನು ಆ

ಹೆಸರಿನಲ್ಲಿ ಮೊಟ್ಟಮೊದಲಿಗೆ ಗುರುತಿಸಿ ಅವರ ಸಾಹಿತ್ಯದ ಜೊತೆಗೆ ಅವರ ಸಂಪ್ರದಾಯ ಆಚರಣೆ, ವೇಷಭೂಷಣ, ವಾದ್ಯ ವಿಶೇಷ-ಇತ್ಯಾದಿಗಳನ್ನು ಸಂಶೋಧಿಸಿ ಮೊದಲಬಾರಿಗೆ ಬೆಳಕಿಗೆ ತಂದವರು ಜೀಶಂಪ ಅವರು. ಈ ವೃತ್ತಿಗಾಯಕರ ಸಾಹಿತ್ಯ ಸಂಪ್ರದಾಯಗಳನ್ನು ಅಭ್ಯಸಿಸಿ, ಆ ಸಾಹಿತ್ಯದ ಮೌಲ್ಯಮಾಪನ ಮಾಡುವುದರ ಜೊತೆಗೆ ಅವರ ಸಮಗ್ರ ಸಂಸ್ಕೃತಿಯನ್ನು, ಅದರ ಹೆಜ್ಜೆ ಗುರುತುಗಳನ್ನು ಗುರುತಿಸಿದ ಕೀರ್ತಿ ಅವರದ್ದು. ಮಲೆಯ ಮಾದೇಶ್ವರನಿಗೆ ಸಂಬಂಧಿಸಿದ ದೇವರ ಗುಡ್ಡರ ಸಂಪ್ರದಾಯ, ಮಂಟೇಸ್ವಾಮಿ ಪರಂಪರೆಯ ನೀಲಗಾರರ ಸಂಪ್ರದಾಯ, ಮೈಲಾರಲಿಂಗನ ಗೊರವರ ಸಂಪ್ರದಾಯ ಹಾಗೂ ಲೌಕಿಕ ಸಂಪ್ರದಾಯಗಳ ಗುಂಪಿನಲ್ಲಿ ಕಂಡುಬರುವ ದೊಂಬಿದಾಸರು, ಕಿಂದರಿ ಜೋಗಿಗಳು, ಹೆಳವರು, ಕರಪಾಲದವರು, ಭಾಗವಂತಿಕೆ ಮೇಳ, ಅಂಟಿಗೆ ಪಂಟಿಗೆ ಮುಂತಾದ ಪರಂಪರೆಗಳನ್ನು ಗುರುತಿಸಿ ಅವರ ಸಾಹಿತ್ಯ ಮತ್ತು ಸಂಪ್ರದಾಯವನ್ನು ಅಧ್ಯಯನದ ವ್ಯಾಪ್ತಿಗೆ ಸೇರಿಸಿಕೊಂಡಿದ್ದಾರೆ. ಹೀಗೆ ಕನ್ನಡ ಜಾನಪದ ಅಧ್ಯಯನಲ್ಲಿ ಮೊದಲ ಬಾರಿಗೆ ಕನ್ನಡದ ವೃತ್ತಿಗಾಯಕ ಚರಿತ್ರೆ, ಸಂಪ್ರದಾಯ ಮತ್ತು ಕಲಾ ಪ್ರಪಂಚದ ಮೇಲೆ ಹೊಸಬೆಳಕು ಚೆಲ್ಲುವ ಅಮೂಲ್ಯ ವಿಷಯಗಳ ವಿವೇಚನೆ ಇಲ್ಲಿ ಕಂಡು ಬರುತ್ತದೆ. ಒಟ್ಟಿನಲ್ಲಿ ಈ ಮಹಾ ಸಂಶೋಧನಾ ಪ್ರಬಂಧ ಜಾನಪದ ಕ್ಷೇತ್ರಕ್ಕೆ ಅತ್ಯಂತ ಮಹತ್ವದ ಕೊಡುಗೆ. ಜಾನಪದ ಸಂಶೋಧನೆ ಮತ್ತು ಅಧ್ಯಯನಕ್ಕೆ ಒಂದು ಘನತೆ ಗೌರವವನ್ನು ತಂದು ಕೊಟ್ಟ ಕೃತಿ ಇದಾಗಿದೆ.

ಸಿಡಿಲ ಮರಿಗಳು

ಇದು ಜೀಶಂಪ ಅವರು ಬರೆದ ಒಂದು ಕಿರು ಕಾದಂಬರಿ. ಕಾದಂಬರಿಕಾರರ ಜನ್ಮಸ್ಥಳದ ಆಸುಪಾಸಿನ ಕೆಲವು ವಿಷಯಗಳನ್ನು ಇದು ಒಳಗೊಂಡಿದೆ. ಅಲ್ಲದೆ ಚನ್ನೂರಿನ ಯುವಕರ ಸಾಧನೆಯನ್ನು ಇಲ್ಲಿ ವರ್ಣಿಸಲಾಗಿದೆ. ಅಂದಿನ ಸ್ವಾತಂತ್ರ ಚಳುವಳಿಯ ಸಂದರ್ಭದಲ್ಲಿ ಗಾಂಧೀಜಿಯವರು 'ಹಳ್ಳಿಗಳಿಗೆ ಹಿಂತಿರುಗಿ' ಎಂದು ನೀಡಿದ ಕರೆಯ ಮೇರೆಗೆ ಎಷ್ಟೋ ಮಂದಿ ವಿದ್ಯಾವಂತ ಯುವಕರು ನೌಕರಿಗೆ ಆಸೆ ಪಡದೆ ಹಳ್ಳಿಗಳಿಗೆ ಹಿಂದಿರುಗಿ ಕೈಲಾದಷ್ಟು ಸೇವೆ ಸಲ್ಲಿಸುತ್ತಿರುತ್ತಾರೆ. ಆ ಊರಿನ ಅನೇಕ ಯುವಕರು ಅನಕ್ಷರಸ್ಥರು. ಗಾಂಧೀಜಿಯವರ ಕರೆಗೆ ಒಳಗಾದವರಲ್ಲಿ ಅದೆ ಊರಿನ ಚಂದ್ರಯ್ಯನ ಮಗ ಲಿಂಗರಾಜು ಸಹ ಒಬ್ಬ. ಇಲ್ಲಿ ಆತನ ವಿದ್ಯಾಭ್ಯಾಸದ ಬಗೆಗೆ ಮಾಹಿತಿ ದೊರಕುವುದಿಲ್ಲ. ಚನ್ನೂರಿನ ಯುವಕರು ಸ್ವಭಾವತಃ ಒಳ್ಳೆಯವರು. ಅವರಿಗೆ ಲಿಂಗರಾಜು ಮಾರ್ಗದರ್ಶಕನಂತೆ ಕಾಣುತ್ತಿದ್ದ. ಇದಕ್ಕೆ ಕಾರಣ ಅವನಲ್ಲಿದ್ದ ವಿಶೇಷ ಗುಣಗಳು. ಚಂದ್ರಯ್ಯನವರೂ ಹೀಗೇ ಇದ್ದರು. ಹಳ್ಳಿಗಳಲ್ಲಿ .ಅನಕ್ಷರತೆ, ಬಡತನ ಮತ್ತು ರೋಗರುಜಿನಗಳಿದ್ದರೂ ಅವೇ ನಿಜವಾದ ದೇಶದ'ಸಂಪತ್ತು ಹಾಗು ಉತ್ಪತ್ತಿಯ ಮೂಲ ಎಂಬುದು ಇಲ್ಲಿ ಲೇಖಕರ ಅಭಿಪ್ರಾಯ. ಹಳ್ಳಿಗಳು ಸಂಪೂರ್ಣವಾಗಿ ಮುಗ್ಧರಿಂದಲೇ

ತುಂಬಿರುವುದಿಲ್ಲ. ಈ ಊರಿನಲ್ಲಿ ಜನಜೀವನ ದಿಕ್ಕುತಪ್ಪಿಸುವ ಕಾರ್ಯಗಳು ನಡೆಯುತ್ತವೆ. ಇಂತಹ ಹಲವು ದ್ವಂದ್ವಗಳನ್ನು ಹೊಂದಿದ ಹಳ್ಳಿಗಳಲ್ಲಿ ಇದೂ ಒಂದು. ಊರಿನ ಸಾಹುಕಾರ ರಂಗಪ್ಪ, ಮುನಿಯನಂತಹವರ ಪಾತ್ರಗಳು ಇಲ್ಲಿ ತುಂಬಾ ಸುಂದರವಾಗಿ ಚಿತ್ರಿತವಾಗಿವೆ. ಇಲ್ಲಿನ ಪ್ರತಿಯೊಂದು ಘಟನೆಗಳೂ ಗ್ರಾಮೀಣ ಪ್ರದೇಶದಲ್ಲಿನ ಕೆಲವು ವಾಸ್ತವ ವಿಷಯಗಳನ್ನು ಅಭಿವ್ಯಕ್ತಗೊಳಿಸುತ್ತವೆ. ಅಲ್ಲದೆ ಬದಲಾವಣೆಯ ಹಾದಿಯಲ್ಲಿನ ಎಡರು ತೊಡರುಗಳನ್ನು ಇಲ್ಲಿ ಕಾದಂಬರಿಕಾರರು ಹಲವಾರು ಸಾಂಕೇತಿಕ ಪ್ರತಿಮೆಗಳ ಮೂಲಕ ನೀಡಿದ್ದಾರೆ. ಉದಾಹರಣೆಗೆ, ಊರಿಗೆ ಅಪಾಯವನ್ನು ಉಂಟುಮಾಡಬಹುದಾಗಿದ್ದ ಭ್ರಾಂತಿಯನ್ನು ಹುಟ್ಟಿಸುತ್ತಿದ್ದ ಹಳೆಯ ಆಲದ ಮರದ ಬುಡ ಭದ್ರ ಇಲ್ಲ. ಹಳೆಯ ಸಂಪ್ರದಾಯಗಳೆಷ್ಟೋ ಅಪಾಯಕಾರಿಯೂ, ಮೌಢ್ಯದ ಅವತಾರಿಗಳಾಗಿಯೂ ಆಗಿರುವ ಸಾಧ್ಯತೆಯುಂಟು. ಚನ್ನೂರಿನಲ್ಲಿ ಅಂತಹ ಮರವನ್ನು ಯುವಕರು ಕಡಿದು ಉರುಳಿಸುತ್ತಾರೆ. ಇದು ಬದಲಾವಣೆಯ ಸಂಕೇತವಾಗಿ ಕಾದಂಬರಿಯಲ್ಲಿ ಕಾಣಿಸಿಕೊಳ್ಳುತ್ತದೆ. ಇಲ್ಲಿನ ಯುವಕರ ಪರಿಶ್ರಮದಿಂದ ತಲೆಎತ್ತಿದ ಶಾಲಾಕಟ್ಟಡ, ಭಜನಾ ಮಂದಿರ ಇವುಗಳು ಇಲ್ಲಿನ ಪ್ರಗತಿಶೀಲ ಬೆಳವಣಿಗೆಯ ಲಕ್ಷಣಗಳೂ ಹೌದು. 'ನಿಮ್ಮೂರಿನ ಯುವಕರು ನಿಜಕ್ಕು ಸಿಡಿಲ ಮರಿಗಳು'ಎಂಬ ಮಾತು ಕಾದಂಬರಿಯ ಶೀರ್ಷಿಕೆಯಾಗಿದೆ.

ಜಾನಪದ ಸಂಗ್ರಹಗಳು

ಜೀಶಂಪ ಅವರು ಸಂಗ್ರಹಿಸಿ ಪ್ರಕಟಿಸಿದ ಜಾನಪದ ಕೃತಿಗಳು ಹಲವಾರು. ಅವುಗಳಲ್ಲಿ 'ಕನ್ನಡ ವೃತ್ತಿಗಾಯಕ ಕಾವ್ಯಗಳು' ಒಂದು ಮೇರು ಕೃತಿ ಎಂದು ಹೇಳಬಹುದು. ೧೯೮೨ರಲ್ಲಿ ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಪ್ರಕಟಗೊಂಡ ಇದು ಸುಮಾರು ೧೧೨೨ ಪುಟಗಳನ್ನು ಒಳಗೊಂಡಿದೆ. ಪ್ರಸ್ತುತ ಮೇರುಕೃತಿಯನ್ನು ಶ್ರೀಯುತರು ವಿಶ್ವದ ಶ್ರೇಷ್ಠ ಜಾನಪದ ವಿದ್ವಾಂಸರಾದ ಪ್ರೊ.ರಿಚರ್ಡ್ ಎಂ. ಡಾರ್ಸನ್‌ರವರಿಗೆ ಗೌರವಪೂರ್ವಕವಾಗಿ ಅರ್ಪಿಸಿದ್ದಾರೆ. ಈ ಕೃತಿಯಲ್ಲಿ ತಂಬೂರಿ ಕಾವ್ಯಗಳು. ತೆಲುಗು ಜಂಗಮರ ಕಾವ್ಯಗಳು, ನೀಲಗಾರರ ಕಾವ್ಯಗಳು, ಸ್ತ್ರೀ ಸಂಪ್ರದಾಯದ ಕಾವ್ಯಗಳು, ಕಂಸಾಳೆ ಕಾವ್ಯಗಳೆಂಬ ಶೀರ್ಷಿಕೆಯಲ್ಲಿ ಕರ್ನಾಟಕದ ಐದು ಪ್ರಮುಖ ವೃತ್ತಿಗಾಯಕ ಸಂಪ್ರಾದಾಯಗಳ ಒಟ್ಟು ೨೪ ಕಾವ್ಯಗಳಿದ್ದು, ಇವಕ್ಕೆ ವಿಸ್ತಾರವಾದ ಹಾಗೂ ವಿದ್ವತ್ಪೂರ್ಣವಾದ ಪ್ರಸ್ತಾವನೆ ಮತ್ತು ಟಿಪ್ಪಣಿ ಇದೆ. ವಿಫುಲವಾದ ನಮ್ಮ ಜನಪದ ಕಾವ್ಯಗಳು ವೃತ್ತಿಗಾಯಕ ಸಂಪ್ರದಾಯದಲ್ಲಿ ಹೇಗೆ ಉಳಿದಬರುತ್ತದೆ? ಬೆಳೆದು ಬರುತ್ತದೆಂಬುದನ್ನು ಲೇಖಕರು ತಮ್ಮ ಎಪ್ಪತ್ತು ಪುಟಗಳ ಸುದೀರ್ಘ ಪ್ರಸ್ತಾವನೆಯಲ್ಲಿ ವಿಚಾರ ಮಾಡಿದ್ದಾರೆ. ಜೀಶಂಪ ಅವರು ಅಭಿಪ್ರಾಯ ಪಡುವಂತೆ ಜನಪದ ಕಲಾವಿದರಲ್ಲಿ ಸಾಂಪ್ರದಾಯಿಕ ಹಿನ್ನೆಲೆಯುಳ್ಳ ವೃತ್ತಿಗಾಯಕರು ಹೇಳಿದ ಇಲ್ಲಿನ ಪ್ರತಿಯೊಂದು ಕಥಾ ಭಾಗವೂ ದೀರ್ಘಕಾವ್ಯಗಳಾಗಿ ಪರಿಣಮಿಸಿದೆ. ವೃತ್ತಿಗಾಯಕರ ಈ ಕಾವ್ಯಗಳು ಜನಪದ

ಸಾಹಿತ್ಯದಲ್ಲಿಯೇ ಮಹತ್ವಪೂರ್ಣವಾದ ಭಾಗವಾಗಿದೆ. ನಮ್ಮ ಜನಪದ ಕಾವ್ಯಗಳಲ್ಲಿ, ವೃತ್ತಿಗಾಯಕ ಸಾಹಿತ್ಯವನ್ನು ಕುರಿತಂತೆ ಪ್ರಕಟವಾಗಿರುವ ಬೃಹತ್ ಸಂಕಲನ ಇದಾಗಿದೆ. ಇಂತಹ ಅಪಾರ ಸಾಹಿತ್ಯವುಳ್ಳ ಜನಪದ ವೃತ್ತಿಗಾಯಕರ ತಂಡವನ್ನು ಗುರುತಿಸಿದ ಕೀರ್ತಿ ಮೊದಲಿಗೆ ಜೀಶಂಪ ಅವರಿಗೆ ಸಲ್ಲುತ್ತದೆ. ಇವರು ವೃತ್ತಿಗಾಯಕ ಸಾಹಿತ್ಯಾಧ್ಯಯನದ ಉದ್ಘಾಟಕರಾಗಿದ್ದು, ಆ ಸಾಹಿತ್ಯದ ವೈಜ್ಞಾನಿಕ ಅಧ್ಯಯನಕ್ಕೆ ಹಾಗೂ ಅವುಗಳ ವ್ಯವಸ್ಥಿತ ರೂಪಕ್ಕೆ ಕಾರಣರಾಗಿದ್ದಾರೆ. ಈ ನಿಟ್ಟಿನಲ್ಲಿ ಇದು ಒಂದು ಮಹಾಸಂಕಲನ. ವೃತ್ತಿಗಾಯಕ ಕಾವ್ಯಗಳು ಈ ಸಂಕಲನದಲ್ಲಿ ಒಂದೆಡೆ ಲಭ್ಯವಾಗುತ್ತಿರುವುದರಿಂದ ಜಾನಪದ ಸಂಶೋಧಕರಿಗೆ, ಕಾವ್ಯಭಾಷಿಗಳಿಗೆ ಹೆಚ್ಚಿನ ಪ್ರಯೋಜನವಾಗುವ ಬೃಹತ್ ಭಂಡಾರವಾಗಿದೆ.

ಶ್ರೀ ಮಂಟೇಸ್ವಾಮಿ ಕಾವ್ಯ

ಗುಣಸಾಗರಿ, ಕಾಳಿಂಗರಾಯ ಇತ್ಯಾದಿ ಕಾವ್ಯಗಳೇ ದೀರ್ಘವಾದುವು ಎನ್ನುವ ಸಂದರ್ಭದಲ್ಲಿ ಇನ್ನು ಅಜ್ಞಾತವಾಗಿದ್ದ ಹಲವಾರು ಕಾವ್ಯಗಳನ್ನು ಗುರುತಿಸಿ ಪರಿಚಯಿಸಿದರು ಜೀಶಂಪ.

ಮಂಟೇಸ್ವಾಮಿ ಕಾವ್ಯ ನೀಲಗಾರ ಸಂಪ್ರದಾಯದ ಧಾರ್ಮಿಕ ಕಾವ್ಯ. ತಮ್ಮ ಕುಲದೈವವಾದ ಮಂಟೇ ಸ್ವಾಮಿ ಹಾಗೂ ಶಿಷ್ಯರಾದ ರಾಚಪ್ಪಾಜಿ, ಸಿದ್ದಪ್ಪಾಜಿಯವರ ಪವಾಡಗಳ ಸರಮಾಲೆ ಕಾವ್ಯದ ಉದ್ದಕ್ಕು ಹಾಸುಹೊಕ್ಕಾಗಿ ಹೆಣೆದುಕೊಂಡಿದೆ. ತಮ್ಮ ಕಾರ್ಯ ಸಾಧನೆಗೆ ಎದುರಾದವರನ್ನು ಏನಾದರೂ ತೊಂದರೆಗೆ ಗುರಿ ಮಾಡಿ ಶರಣಾಗತರನ್ನಾಗಿ ಮಾಡಿಕೊಳ್ಳುವ ಮನೋಭಾವವನ್ನು ಈ ಮೂರು ಪಾತ್ರಗಳಲ್ಲಿ ಕಾಣಬಹುದಾಗಿದೆ. ಕಾವ್ಯದ ಆರಂಭ ಹೀಗೆ; ಕಲ್ಯಾಣದಲ್ಲಿ ಬಸವಣ್ಣನವರು ಅವರ ಮಡದಿ ನೀಲಮ್ಮನವರು, ಒಕ್ಕಳ ಅಕ್ಕಿಹಾಕಿ ಒಂದು ಮಾನ ಬೇಳೆ ಹಾಕಿ ಒಂದೇ ಬದನೆಕಾಯಿಯಲ್ಲಿ ಒಂದೇ ಬಾಳೆಯ ಎಲೆಯ ಮೇಲೆ ಲಕ್ಷದ ಮೇಲೆ ತೋಂಭತ್ತಾರು ಸಾವಿರ ಜಂಗುಮರಿಗೆ ನಿತ್ಯವೂ ಎಡೆಮಾಡುತ್ತಿದ್ದವರು, ತಮಗೊಬ್ಬ ಗುರುವನ್ನು ಬಯಸಿ, ಕಲ್ಯಾಣ ಪಟ್ಟಣದ ಬಾಗಿಲಲ್ಲಿ ಆನೆಗಾತ್ರದ ಪಂಚಲೋಹದ ನಾಲಿಗೆ ಇಲ್ಲದ ಗಂಟೆ ಮಾಡಿಸಿ ಕಟ್ಟಿದ್ದರು. ಅದು 'ನಾದಸಪ್ತ' ಮಾಡಿದಾಗ ಗುರು ಬಂದರೆಂದು ತಿಳಿದು ಅವರಿಗಾಗಿ ಕಾದು ಕುಳಿತಿದ್ದಾರೆ ಎಂಬುದಾಗಿ ಕಥೆ ಚಾಲನೆಗೊಳ್ಳುತ್ತದೆ. ಗದ್ಯ ಪದ್ಯಗಳೆರಡನ್ನು ಒಳಗೊಂಡ ಈ ಕಾವ್ಯವು ಹಲಗೂರಿನ ಪಾಂಚಾಳದವರನ್ನು ಶರಣಾಗಿಸಿಕೊಳ್ಳುವ ಮೂಲಕ ಮುಕ್ತಾಯವಾಗುತ್ತದೆ. ಈ ಪ್ರಕಟವಾಗಿರುವ 'ಶ್ರೀ ಮಂಟೇಸ್ವಾಮಿ ಕಾವ್ಯ' ಒಂದು ಅತ್ಯುತ್ತಮ ಪಠ್ಯವೆಂದೂ, ಅನೇಕ ಪಾಠಾಂತರಗಳೊಡನೆ ಇದನ್ನು ಸುಧೀರ್ಘವಾಗಿ ಸಂಪಾದಿಸಿ ಪರಿಷ್ಕರಿಸುವ ಅಗತ್ಯವಿದೆಯೆಂದು ಹೇಳಿರುವುದು ಸಮಂಜಸವೆನಿಸುತ್ತದೆ. ಅಲ್ಲದೆ ಇತರ ಪಾಠಾಂತರಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಬರೆದಿರುವ ಪ್ರಸ್ತಾವನಾ ಭಾಗ ಒಂದು ಅಮೂಲ್ಯ ಕೊಡುಗೆ. ಮಂಟೇಸ್ವಾಮಿಯ

ಮೂಲದ ಬಗೆಗೆ ಕೆಲವು ಕುತೂಹಲಕರವಾದ ಚರ್ಚೆ ನಡೆಸಿದ್ದಾರೆ. ಹೀಗಾಗಿ ಪ್ರಥಮ ಬಾರಿಗೆ ನೀಲಗಾರರ ಪೂರ್ಣ ಕಾವ್ಯದ ರೂಪವನ್ನು ನಮಗೆ ಪರಿಚಯಿಸುವಲ್ಲಿ ಇದು ಒಂದು ಉತ್ತಮ ಕೃತಿಯೇ ಸರಿ.

ಪಿರಿಯಾಪಟ್ಟಣದ ಕಾಳಗ

ಜೀಶಂಪರವರು ಸಂಗ್ರಹಿಸಿದ 'ಪಿರಿಯಾಪಟ್ಟಣದ ಕಾಳಗ' ಒಂದು ಐತಿಹಾಸಿಕ ಕಥನ ಕಾವ್ಯ. ಮೈಸೂರು ಹಾಗೂ ಪಿರಿಯಾಪಟ್ಟಣದ ರಾಜರುಗಳ ನಡುವೆ ನಡೆದ ಯುದ್ಧ ಹಾಗೂ ಅದರ ಪರಿಣಾಮಗಳನ್ನು ತುಂಬಾ ಸುಂದರವಾಗಿ ಸಂಗ್ರಹಿಸಲಾಗಿದೆ. ಇದಕ್ಕಿರುವ ಮೌಲ್ಯದ ದೃಷ್ಟಿಯಿಂದ ಕ್ರಮಬದ್ಧವಾಗಿ ಸಂಪಾದಿಸಿ, ಅಗತ್ಯವಾದ ಮುನ್ನುಡಿ ಹಾಗೂ ಹಿನ್ನುಡಿ, ಪ್ರಸ್ತಾವನೆ, ಅರ್ಥಕೋಶಗಳೊಡನೆ ಮುಂದಿನ ಅಧ್ಯಯನ ಹಾಗೂ ಸಂಗ್ರಹ ಕೃತಿಗಳಿಗೆ ಮಾದರಿಯಾಗುವಂತೆ ಪ್ರಕಟಿಸಲಾಗಿದೆ.

ದೊಂಬಿದಾಸರ ಲಾವಣಿಗಳು

೧೯೭೭ರಲ್ಲಿ ಪ್ರಕಟಗೊಂಡ ಈ ಕೃತಿಯು ದೊಂಬಿದಾಸರು ಹಾಡುವ ಬಹುಮುಖ್ಯವಾದ ಕತೆಗಳನ್ನು ಒಳಗೊಂಡ ಒಂದು ಸಂಕಲನ. ಇದರಲ್ಲಿ ಒಟ್ಟು ಹದಿನಾರು ಕಥೆಗಳು ಪೂರ್ಣರೂಪದಲ್ಲಿ ಬೆಳಕುಕಂಡಿವೆ. ಪ್ರಸ್ತಾವನೆಯ ಭಾಗದಲ್ಲಿ ದೊಂಬಿದಾಸರನ್ನು ಕುರಿತ ಒಂದು ಅಧ್ಯಯನವೇ ಇದೆ. ಹಾಗೆಯೇ ಇಲ್ಲಿ ಸಂಗ್ರಹಿಸಿ ಕೊಟ್ಟಿರುವ ಅವರ ಸಾಹಿತ್ಯ ಭಾಗದ ವಿಮರ್ಶೆಯೂ ಹೆಚ್ಚಿನ ಅಧ್ಯಯನಕ್ಕೆ ದಾರಿಮಾಡಿ ಕೊಡಲು ಪ್ರೇರಕವಾಗುವಂತೆ ಪ್ರಸ್ತಾಪಿಸಲ್ಪಟ್ಟಿದೆ. ದೊಂಬಿದಾಸರು ಹಾಡುವ ಲಾವಣಗಳಲ್ಲಿ ಪ್ರಸಿದ್ದವಾದ ಮಾಗಡಿ ಕೆಂಪೇಗೌಡನ ಲಾವಣಿಯ ಬಗೆಗೆ ಅವರು ಹೇಳುವ.

ಹೆಳವರು, ತೆಲುಗು ಜಂಗಮರು, ದೊಂಬಿದಾಸರು ಈ ಮೂರು ಸಂಪ್ರದಾಯದವರೂ ಪ್ರಕೃತಿ ಕಥೆಯನ್ನು ಹಾಡುತ್ತಾರೆ. ಆದರೆ ದೊಂಬಿದಾಸರಲ್ಲಿ ಈ ಕತೆ ಹೆಚ್ಚಾಗಿ ಪ್ರಚಲಿತವಿರುವಂತೆ ತೋರುತ್ತದೆ. ಇಲ್ಲಿ ಇದರ ಚಾರಿತ್ರಿಕ ಮೌಲ್ಯಕ್ಕಿಂತ ಜನಪದಕಥೆಯ ಆವರಣ ಮುಖ್ಯವಾದುದಾಗಿದೆ.

ಕನ್ನಡ ಜನಪದ ಕಥೆಗಳು

ಕರ್ನಾಟಕ ಜಾನಪದ ಅಧ್ಯಯನದ ಸಂದರ್ಭದಲ್ಲಿ ಸಂಗ್ರಹ ಕಳೆದ ಶತಮಾನದಿಂದಲೇ ಆರಂಭವಾದರೂ ಗೀತೆ ಮತ್ತು ಗಾದೆಗಳಿಗೆ ಸಂಬಂಧಿಸಿದಂತೆ ಮಾತ್ರ. ಉಳಿದ ಪ್ರಕಾರಗಳತ್ತ ಯಾರೂ ವಿಶೇಷವಾದ ಆಸಕ್ತಿಯನ್ನು ವಹಿಸದೆ ಆ ಕ್ಷೇತ್ರದಲ್ಲಿ ಆಗಬೇಕಾದ ಕೆಲಸ ಅಪಾರ, ಅದರಲ್ಲೂ ಜನಪದ ಕಥೆಗಳ ಕ್ಷೇತ್ರ ಮಹತ್ವದ್ದು. ಜೀಶಂಪ ಅವರು ಈ ಕ್ಷೇತ್ರಕ್ಕೆ ನೀಡಿರುವ ಕೊಡುಗೆ

ಮಹತ್ವಪೂರ್ಣವಾದುದು. ಕಥೆಗಳನ್ನು ಹೇಗೆ ಸಂಗ್ರಹಿಸಬೇಕು? ಏತಕ್ಕಾಗಿ ಸಂಗ್ರಹಿಸಬೇಕು? ಅದರ ಅಧ್ಯಯನ ಕ್ರಮ ಹೇಗೆ? ಇತ್ಯಾದಿಯಾಗಿ ತಮ್ಮ ಮಾದರಿ ಸಂಗ್ರಹ ಅಧ್ಯಯನಗಳಿಂದ ತೋರಿಸಿಕೊಟ್ಟಿದ್ದಾರೆ. ಇವರು 'ಕನ್ನಡ ಜನಪದ ಕಥೆಗಳು', 'ಆಯ್ದ ಜನಪದ ಕಥೆಗಳು', 'ದಕ್ಷಿಣ ಕರ್ಣಾಟಕದ ಜನಪದ ಕಥೆಗಳು', 'ಚೋಟುದ್ದ ಚಿನ್ನಪ್ಪ ಮತ್ತು ಇತರ ಜನಪದ ಕಥೆಗಳು' ಎಂಬ ನಾಲ್ಕು ಕಥಾ ಸಂಗ್ರಹಗಳನ್ನು ಹೊರತಂದಿದ್ದಾರೆ. ಅವುಗಳಲ್ಲಿ 'ಕನ್ನಡ ಜನಪದ ಕಥೆಗಳು' ಜೀಶಂಪರವರಿಂದ ಕಥೆಗಳ ಕ್ಷೇತ್ರಕ್ಕೆ ಸಂದ ಪ್ರಮುಖ ಕೃತಿ. ಕನ್ನಡದಲ್ಲಿ ಇದುವರೆಗೆ ಪ್ರಕಟವಾಗಿರುವ ಜನಪದ ಕತೆಗಳ ಸಂಕಲನಗಳಲ್ಲೆಲ್ಲ ಇದಕ್ಕೆ ಮಹತ್ವದ ಸ್ಥಾನವಿದೆ. ಈ ಕೃತಿಯ ಪೀಠಿಕೆಯಲ್ಲಿ ಜೀಶಂಪ ಅವರ ಆಳವಾದ ಅಧ್ಯಯನದ ಫಲವನ್ನು ಕಾಣಬಹುದಾಗಿದೆ.

೧೯೭೦ರಲ್ಲಿ ಮೈಸೂರು ವಿಶ್ವವಿದ್ಯಾಲಯದಿಂದ ಪ್ರಕಟಗೊಂಡ ಈ ಕೃತಿ ಮತ್ತೆ ೧೯೮೫ರಲ್ಲಿ ದ್ವಿತೀಯ ಮುದ್ರಣ ಪಡೆಯಿತು. ಇದು ಜೀಶಂಪ ಅವರು ಬಹಳ ಶ್ರಮವಹಿಸಿ ಸಿದ್ಧಪಡಿಸಿದ ಒಂದು ಕಥಾ ಸಂಕಲನ. ಇದು ೬೩ ಪುಟಗಳ ದೀರ್ಘ ಪ್ರಸ್ತಾವನೆಯನ್ನು ಒಳಗೊಂಡಿದೆ. ಇದು ಜನಪದ ಕಥೆಯ ರೂಪಲಕ್ಷಣಗಳನ್ನು ಸಮರ್ಥವಾಗಿ ಚರ್ಚಿಸುವ ಮೌಲಿಕ ಬರಹವಾಗಿದೆ. ಗ್ರಿಮ್ ಸಹೋದರರಿಂದ ಆರಂಭವಾದ ಜನಪದ ಕಥಾ ಅಧ್ಯಯನದ ಹೊಸಶಕೆ, ವೈಜ್ಞಾನಿಕ ದೃಷ್ಟಿಯ ಅಧ್ಯಯನ, ಗ್ರಿಮ್‌ರಿಗಿಂತಲೂ ಮೊದಲೇ ನಡೆದ ಅಧ್ಯಯನದ ಸಮೀಕ್ಷೆ, ಗ್ರಿಮ್ ಸಹೋದರರ ಆನಂತರದ ಸಾಧನೆ, ಡಬ್ಲ್ಯೂ, ಜೆ.ಥಾಮ್ಸ್ ಅವರ ಸಾಧನೆಗಳು, ತಮ್ಮ ದೇಶದ ಜಾನಪದವನ್ನು ಸಂರಕ್ಷಿಸುವಲ್ಲಿ ಫಿನ್ಲೆಂಡಿನ ವಿದ್ವಾಂಸರು ವಹಿಸಿದ ಕಾಳಜಿ, ಅಲ್ಲಿನ ಹಲವಾರು ಸಂಘಸಂಸ್ಥೆಗಳ ಕಾರ್ಯಚಟುವಟಿಕೆಗಳ ವಿವರ, ಕಾರ್ಲೆ ಕ್ರಾಹ್ನನ ಜನಪದ ಕಥೆಗಳ ಸಂಬಂಧವಾದ ಸಿದ್ಧಾಂತ, ಜೂಲಿಯಸ ಕ್ರಾಹ್ನ 'ಕಾಲೇವಾಲ' ಅಭ್ಯಾಸಕ್ಕೆ ಅಳವಡಿಸಿದ ಚಾರಿತ್ರಿಕ ಭೌಗೋಳಿಕ ಕ್ರಮ, ಫ್ರಾನ್ಸ್, ಸ್ಪೇರ್ಯಿನ್, ಐರ್ಲೆಂಡ, ಸ್ಕಾಟ್ ಲ್ಯಾಂಡ, ಕೆಲ್ಟಿಕ್, ಇಂಗ್ಲೆಂಡ, ರಷ್ಯಾ, ಜಪಾನ್, ಅಮೆರಿಕಾ, ಆಫ್ರಿಕ-ಇತ್ಯಾದಿ ಪ್ರಪಂಚದಾದ್ಯಂತ ಜನಪದ ಕಥೆಗಳ ಕ್ಷೇತ್ರದಲ್ಲಿ ನಡೆದ ಅಧ್ಯಯನದ ಸ್ಥೂಲ ಸಮೀಕ್ಷೆಯನ್ನು ನಡೆಸಿದ್ದಾರೆ. ಭಾರತದಲ್ಲಿ ಇದುವರೆಗೆ ನಡೆದ ಅತ್ಯಲ್ಪ ಪ್ರಮಾಣದ ಅಧ್ಯಯನದ ಪರಿಚಯ ಮಾಡಿಕೊಟ್ಟು, ಕರ್ನಾಟಕದಲ್ಲಿ ಅದರ ಪ್ರಭಾವ, ಪ್ರೇರಣೆ ಹಾಗೂ ಅಧ್ಯಯನದ ಗೊತ್ತುಗುರಿಗಳನ್ನು ತಿಳಿಸಿದ್ದಾರೆ. ಸ್ವಿತ್‌ಥಾನ್ಸ್‌ರವರ ಕಥೆಗಳ ವರ್ಗೀಕರಣ ಮಾದರಿಯನ್ನೇ ಅನುಸರಿಸಿದ್ದಾರೆ. ಒಟ್ಟು ೬೮ ಕಥೆಗಳಿರುವ ಈ ಸಂಕಲನದ ಕಥೆಗಳನ್ನು ಇಡಿಯಾಗಿ ಅತಿಮನುಷ ಪತ್ನಿಯರು, ಅತಿಮಾನುಷ ಪತಿಗಳು, ಅತಿಮಾನುಷ ವಿರೋಧಿಗಳು, ರಮ್ಯ ಕಥೆಗಳು, ಅದ್ಭುತ ಕಥೆಗಳು,ಬುದ್ಧಿವಂತಿಕೆಯ ಕಥೆಗಳು, ಹಾಸ್ಯ ಕಥೆಗಳು, ಪ್ರಾಣಿಕಥೆಗಳೆಂಬುದಾಗಿ ೮ ಬಗೆಯಾಗಿ ವಿಂಗಡಿಸಿದ್ದಾರೆ. ಪಾಶ್ಚಾತ್ಯ ವಿದ್ವಾಂಸರು ವರ್ಗೀಕರಿಸಿರುವ ಜನಪದ ಕಥೆಗಳ ಎಲ್ಲ ಮಾದರಿಗಳೂ ಕನ್ನಡದಲ್ಲಿ ದೊರಕುತ್ತವೆ ಎಂಬುದಕ್ಕೆ ಈ ಸಂಕಲನ ಉತ್ತಮ ನಿದರ್ಶನವಾಗಿದೆ. ಈ ಸಂಕಲನದ ಕಥೆಗಳನ್ನು

ದಕ್ಷಿಣ ಕರ್ನಾಟಕದ ಬಯಲುನಾಡಿನ ವಿವಿಧ ಭಾಗಗಳಲ್ಲಿ ಸಂಗ್ರಹಿಸಲಾಗಿದೆ. ಈ ಸಂಕಲನದ ಕಥೆಗಳನ್ನು ೩೪ ಮಂದಿ ವ್ಯಕ್ತಿಗಳಿಂದ ಸಂಗ್ರಹಿಸಿದ್ದಾರೆ. ಇವರೆಲ್ಲ ವಿವಿಧ ಸಾಮಾಜಿಕ ಪರಿಸರದಿಂದ ಕೂಡಿದವರಾಗಿದ್ದು ಇಲ್ಲಿಯ ಸಂಗ್ರಹಿತವಾದ ಕಥೆಗಳಲ್ಲಿ ಏಕಮುಖ ನಿರೂಪಣೆ ಕಾಣಲು ಸಾಧ್ಯವಿಲ್ಲ. ಒಟ್ಟಿನಲ್ಲಿ ಗೊತ್ತಾದ ಪ್ರದೇಶವೊಂದನ್ನು ದೃಷ್ಟಿಯಲ್ಲಿಟ್ಟುಕೊಂಡು ಆ ಪ್ರದೇಶದ ಕೆಲವು ಗೊತ್ತಾದ ನೆಲೆಗಳಲ್ಲಿ ಕಥೆಗಳನ್ನು ಆರಿಸಿ ಬಯಲು ಸೀಮೆಯ ಕಥೆಗಳ ಮಾದರಿಗಳನ್ನು ಅಭ್ಯಾಸ ಮಾಡುವ ಪ್ರಯತ್ನ ಇದಾಗಿದೆ. ತಾವು ಸಂಗ್ರಹಿಸಿದ ಕಥೆಗಳ ಪ್ರದೇಶದ ನಕ್ಷೆ, ಅನುಬಂಧದಲ್ಲಿ ಕಥೆಗಳ ಭಿನ್ನರೂಪಗಳ ಸಾರಸಂಗ್ರಹ, ಅರ್ಥಕೋಶ, ಕಥೆಯನ್ನು ನಿರೂಪಿಸಿದ ವ್ಯಕ್ತಿಗಳ ವಿವರಗಳನ್ನು ಒಳಗೊಂಡಿದೆ. ಒಟ್ಟಿನಲ್ಲಿ ಕನ್ನಡ ಜನಪದ ಕಥೆಗಳ ಸಂಗ್ರಹ, ಸಂಪಾದನೆಯಲ್ಲಿ ಅತ್ಯಂತ ವೈಜ್ಞಾನಿಕ ವಿಧಾನವನ್ನು ಅನುಸರಿಸಿದ ಪ್ರಥಮ ಗ್ರಂಥ ಇದಾಗಿದೆ.

'ಆಯ್ದ ಜನಪದ ಕಥೆಗಳು' ಜೀಶಂಪ ಅವರ ಎರಡನೆಯ ಕಥಾ ಸಂಗ್ರಹ. ಇಲ್ಲಿ ಒಟ್ಟು ೪೧ ಕಥೆಗಳಿವೆ. ಕರ್ನಾಟಕದ ಬೇರೆ ಬೇರೆ ಪ್ರದೇಶಗಳಿಂದ ಇವುಗಳನ್ನು ಸಂಗ್ರಹಿಸಿದ್ದು, ಕಥೆಗಳಲ್ಲಿ ಪ್ರಾದೇಶಿಕ ವೈವಿಧ್ಯತೆಯನ್ನು ಗುರುತಿಸಲು ಅನುಕೂಲವಾಗುವಂತೆ ಒಬ್ಬೊಬ್ಬ ಸಂಗ್ರಾಹಕನ ಕಥೆಗಳನ್ನು ಒಂದೇ ಕಡೆಯಲ್ಲಿ ಜೋಡಿಸಿ ಕೊಟ್ಟಿದ್ದಾರೆ. ಈ ಸಂಗ್ರಹದಲ್ಲಿ ಕಿನ್ನರ ಕಥೆ, ವಾಸ್ತವಿಕ ಕಥೆ, ಅತಿಮಾನುಷ ಕಥೆ, ಪ್ರಾಣಿ ಕಥೆ, ಬುದ್ಧಿವಂತಿಕೆ ಕಥೆ, ವಿನೋದ ಕಥೆಗಳು ಸೇರಿಕೊಂಡಿವೆ. ೧೯೭೯ರಲ್ಲಿ ಪ್ರಕಟಗೊಂಡ ದಕ್ಷಿಣ ಕರ್ನಾಟಕದ ಜನಪದ ಕಥೆಗಳು ಜೀಶಂಪರವರ ಮೂರನೆಯ ಕಥಾ ಸಂಗ್ರಹ.

ಇಲ್ಲಿನ ಕಥೆಗಳನ್ನು ಬಯಲುಸೀಮೆಯ ಕಥೆಗಳು ಮತ್ತು ಮಲೆನಾಡಿನ ಕಥೆಗಳು ಎಂದು ವಿಭಾಗಿಸಿಕೊಳ್ಳಲಾಗಿದೆ. ಬಯಲುಸೀಮೆ ಪ್ರದೇಶದಿಂದ ಸಂಗ್ರಹಿಸಿದ ಇಪ್ಪತ್ತೆಂಟು ಕಥೆಗಳು ಹಾಗೂ ಮಲೆನಾಡಿನ ಪ್ರದೇಶದಿಂದ ಸಂಗ್ರಹಿಸಿದ ಇಪ್ಪತ್ತಮೂರು ಕಥೆಗಳು, ಒಟ್ಟು ಐವತ್ತೊಂದು ಕಥೆಗಳು ಈ ಸಂಗ್ರಹದಲ್ಲಿ ಅಡಕಗೊಂಡಿವೆ. ಇಲ್ಲಿನ ಕಥೆಗಳನ್ನು ವರ್ಗೀಕರಿಸುವ ಪ್ರಯತ್ನ ಮಾಡಿಲ್ಲ. ಆದರೆ ಹೊಸ ಕಥೆಗಳನ್ನು ಮಾತ್ರ ಆಯ್ದು ಸೇರಿಸಲಾಗಿದೆ. ಹೀಗಾಗಿ ಈ ಸಂಗ್ರಹಕೃತಿ ವೈಶಿಷ್ಟ್ಯಪೂರ್ಣವಾದುದೆನಿಸುತ್ತದೆ.

ಜೀಶಂಪ ಅವರ ನಾಲ್ಕನೆಯ ಜನಪದ ಕಥೆಗಳ ಸಂಗ್ರಹ 'ಚೋಟುದ್ದ ಚಿನ್ನಪ್ಪ ಮತ್ತು ಇತರ ಜನಪದ ಕಥೆಗಳು' ಈ ಕೃತಿಯನ್ನು ೧೯೮೦ರಲ್ಲಿಮಕ್ಕಳಿಗಾಗಿ ಐ.ಬಿ..ಎಚ್. ಪ್ರಕಾಶನದವರು ಪ್ರಕಟಸಿದ್ದಾರೆ. ವರ್ಣರಂಜಿತ ಚಿತ್ರಗಳ ಮೂಲಕ ನಿರೂಪಣೆಗೊಂಡಿರುವ ಇಲ್ಲಿನ ಕಥೆಗಳು ರಂಜನೀಯವಾಗಿದ್ದು ಆಕರ್ಷಕವಾಗಿವೆ. ಚೋಟುದ್ಧ ಚಿನ್ನಪ್ಪ, ಮೆಣಸಣ್ಣ, ಬೇವಿನಮರದಮ್ಮ, ಕಜ್ಜಾಯ, ಕುಂಟನರಿ, ಕತ್ತೆಹುಲಿ, ಹಕ್ಕಿಯ ಸಿಟ್ಟು, ನರಿಯಣ್ಣ, ಪಿಟ್ಟೆಕಾಟ- ಎಂಬ ಒಟ್ಟು ಒಂಭತ್ತು ಕಥೆಗಳಿವೆ. ಇವು

ಮಕ್ಕಳಿಗಾಗಿಯೇ ರಚಿತವಾದ ಕಥೆಗಳಾಗಿವೆ. ಒಟ್ಟಿನಲ್ಲಿ ಕನ್ನಡ ಜನಪದ ಕಥೆಗಳ ಕ್ಷೇತ್ರಕ್ಕೆ ಜೀಶಂಪ ಅವರು ನೀಡಿರುವ ಕೊಡುಗೆ ಮಹತ್ವಪೂರ್ಣವಾದುದು. ಜನಪದ ಕಥೆಗಳ ಸಂಬಂಧವಾಗಿ ಕನ್ನಡದಲ್ಲಿ ಏನಾದರೂ ಹೆಚ್ಚಿನ ಅಧ್ಯಯನಗಳು ನಡೆದಿದ್ದರೆ ಅದರ ಶ್ರೇಯಸ್ಸು ಜೀಶಂಪ ಅವರಿಗೆ ಸಲ್ಲಬೇಕು. ಸಂಗ್ರಹ ಹಾಗೂ ಅಧ್ಯಯನಗಳೆರಡನ್ನು ಸಮರ್ಥವಾಗಿ ನಿರ್ವಹಿಸಬಲ್ಲ ಇವರು ಕಥೆಗಳಿಗೆ ಸಂಬಂಧಿಸಿದಂತೆ ಕೈಗೊಂಡಿರುವ ತೀರ್ಮಾನಗಳು ನಿರ್ಣಾಯಕವಾದವು ಎಂದೇ ಹೇಳಬೇಕಾಗುತ್ತದೆ.

ಜನಪದ ಕಾವ್ಯ ಕಥೆಗಳು

ಜೀಶಂಪ ಅವರ 'ಜನಪದ ಕಾವ್ಯ ಕಥೆಗಳು' ವೃತ್ತಿಗಾಯಕ ಕಾವ್ಯಗಳ ಅಧ್ಯಯನ ಸಂದರ್ಭದಲ್ಲಿ ಬರೆದು ಪ್ರಕಟಿಸಿದ ಮಹತ್ವದ ಲೇಖನಗಳ ಸಂಕಲನ. ೧೯೭೧ರಲ್ಲಿ ಪ್ರಕಟವಾದ ಈ ಗ್ರಂಥದಲ್ಲಿ ಕರಪಾಲ ಕಥೆಗಳು, ಕಂಸಾಳೆ ಕಥೆಗಳು, ಮಂಟೇಸ್ವಾಮಿ ಕಥೆಗಳು, ಗುಡ್ಡರ ಕಥೆಗಳು, ನೀಲಗಾರರ ಕಥೆಗಳು, ಗುಡ್ಡದ ಕಥೆಗಳು, ನೀಲಗಾರರ ಕಥೆಗಳು, ಜುಂಜಪ್ಪನ ಕಥೆಗಳು, ಹೆಂಗಸರ ಹಾಡ್ಗತೆಗಳೆಂಬ ಒಟ್ಟು ೭ ಭಾಗಗಳಿವೆ. ಪ್ರತಿಯೊಂದರಲ್ಲೂ ಜುಂಜಪ್ಪನ ಕಥೆಗಳು, ಬೇರೆ ಬೇರೆ ಕಥೆಗಳನ್ನು ಪ್ರಸ್ತಾಪಿಸಲಾಗಿದೆ. ಕಂಸಾಳೆ ಕಥೆಗಳು ಎಂಬ ಭಾಗದಲ್ಲಿ ಮಾದೇಶ್ವರ ಕಾವ್ಯದ ತಾಳಗತೆಯಿಂದ ಯಾವ ಭಾಗವೂ ಮುಕ್ಕಾಗದಂತೆ ರೂಪಿಸಲಾಗಿದೆ. ಮಂಟೇಸ್ವಾಮಿಯ ಕಥೆಗಳು ಎಂಬ ಭಾಗದಲ್ಲಿ 'ಯೋಗಿ ಬಂದವರೆ ನೋಡಿರಿ', 'ಮಂಟೇ ಲಿಂಗಯ್ಯನ ಮದ್ದಾನೆ', 'ಹಲಗೂರು ಪಾಂಚಾಲ ಕೇರಿಗೆ', 'ಹೆತ್ತಯ್ಯ ರಾಚಪ್ಪನವರು' ಮುಂತಾದ ಶೀರ್ಷಿಕೆಗಳ ಅಡಿಯಲ್ಲಿ ಮಂಟೇಸ್ವಾಮಿಯ ಕಥೆ ಸುಂದರವಾಗಿ ರೂಪುಗೊಂಡಿದೆ. ಕರಪಾಲ ಕಥೆಗಳಲ್ಲಿ 'ಕಾಡುಸಿದ್ದಮ್ಮ', 'ಬಸವಕುಮಾರ ಲೋಹಿತ ಕುಮಾರ', 'ನೀಲಕಂಠ ರೂಪವತಿ', 'ಶಿವಯೋಗಿ ಪರಯೋಗಿ' ಎಂಬ ೪ ಕಥೆಗಳನ್ನು ತಿಳಿಸಿಲಾಗಿದೆ. ಈ ಸಂಕಲನದಲ್ಲಿನ ಮತ್ತೊಂದು ಪ್ರಮುಖ ಭಾಗ ಕಾಡುಗೊಲ್ಲರ ಸಾಂಸ್ಕೃತಿಕ ವೀರ ಜುಂಜಪ್ಪನಿಗೆ ಸಂಬಂಧಿಸಿದ ಕಥೆಗಳದು. ಮೂರು ತಲೆಮಾರಿಗೆ ಅಡಕವಾದ ಇಲ್ಲಿನ ಕಥೆ ಜುಂಜಪ್ಪನ ಸುತ್ತ ಹರಡಿಕೊಂಡು ಕೊನೆಗೆ ದುರಂತ ಕಥೆಯಿಂದಾಗಿ ಮುಕ್ತಾಯಗೊಳ್ಳುತ್ತದೆ. ಇಲ್ಲಿ ಸಂಗ್ರಹವಾಗಿ ನೀಡಿರುವ ಕಾವ್ಯಗಳು ಉತ್ಕೃಷ್ಟವಾದಂತಹವುಗಳು. ಆದರೂ ಸಹ ಜೀಶಂಪ ಅವರು ಅವುಗಳ ಮೂಲಸ್ವರೂಪ ಮುಕ್ಕಾಗದಂತೆ ಎಚ್ಚರ ವಹಿಸಿ ಅವುಗಳನ್ನು ಪ್ರಕಟಿಸುವಲ್ಲಿ ಯಶಸ್ವಿಯಾಗಿದ್ದಾರೆಂದು ಹೇಳಬಹುದು.

ಜೀಶಂಪ ಅವರ ಸಂಗ್ರಹ, ಸಂಪಾದನೆ, ಸಂಶೋಧನೆ, ಅಧ್ಯಯನಕ್ಕೆ ಸಂಬಂಧಿಸಿದ ಹಲವಾರು ಕೃತಿಗಳು ಈಗಾಗಲೇ ಬೆಳಕು ಕಂಡಿದ್ದು, ಇನ್ನೂ ಕೆಲವು ಅಪ್ರಕಟಿತವಾಗಿಯೇ ಉಳಿದಿವೆ. ಕೆಲವು ಮುಖ್ಯ ಕೃತಿಗಳನ್ನು ಇಲ್ಲಿ ವಿವರಿಸುವ ಪ್ರಯತ್ನ ಮಾಡಲಾಗಿದೆ. ಅಷ್ಟೇ ಅಲ್ಲದೆ, ಹಲವು ವಿಚಾರ ಸಂಕಿರಣಗಳಲ್ಲಿ ಮಂಡಿಸಿದ ಇನ್ನೂರಕ್ಕೂ ಹೆಚ್ಚಿನ ಜಾನಪದ ಸಂಶೋಧನಾತ್ಮಕ ಪ್ರಬಂಧಗಳು ಇದ್ದು, ಇವುಗಳು ಪ್ರಕಟಗೊಂಡಲ್ಲಿ ಜಾನಪದ

ಅಧ್ಯಯನಕಾರರಿಗೆ ಉತ್ತಮವಾದ ಮಾರ್ಗದರ್ಶನ ನೀಡಬಲ್ಲವು. ಅಲ್ಲದೆ ಇವರು ಸಂಪಾದಿಸಿದ ಹಲವು ಮಹತ್ವಪೂರ್ಣ ಗೌರವ ಗ್ರಂಥಗಳು ಇವರ ಸಾಧನೆಯ ಕೈಗನ್ನಡಿಯಂತಿವೆ. ಜೀಶಂಪ ಅವರು ಸಂಪಾದಿಸಿ ಪ್ರಕಟಿಸಿದ ಸಾಹಿತ್ಯ ಪತ್ರಿಕೆಗಳಾದ, ಕನಕ ಕಿರಣ, ಮಧುಕರ, ಪ್ರಸಾದ, ಪರಂಪರೆ ಹಾಗೂ ಸಂಪಾದಿತ ಜಾನಪದ ಪತ್ರಿಕೆಗಳಾದ ಜಾನಪದ, ಮೂಡಲಪಾಯ, ಜಾನಪದ ವಾರ್ತಾ ಪತ್ರಿಕೆ - ಇವುಗಳು ನಾಡಿನ ಹಲವಾರು ಕಲೆ, ಕಲಾವಿದರು ಹಾಗೂ ನಾಡಿನ ಸಂಸ್ಕೃತಿಯ ಸಾರವನ್ನು ಸೂಸುವುದರ ಮೂಲಕ ಜನರ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿದಿದೆ. ಖ್ಯಾತ ಕಲಾವಿದರಾದ ಪಿ.ಆರ್. ತಿಪ್ಪೇಸ್ವಾಮಿ ಅವರಂತಹ ಗೆಳೆಯರೊಡಗೂಡಿ ನಾಡಿನ ಮೂಲೆ ಮೂಲೆಗಳಲ್ಲೂ ಸಂಚರಿಸಿ ರೂಪಿಸಿದ ಮೈಸೂರು ವಿಶ್ವವಿದ್ಯಾಲಯದ 'ಜಾನಪದ ವಸ್ತು ಸಂಗ್ರಹಾಲಯ' ಭಾರತದಲ್ಲೇ ಅತಿ ದೊಡ್ಡ ಹಾಗೂ ಉತ್ತಮ ಜಾನಪದ ವಸ್ತು ಸಂಗ್ರಹಾಲಯ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಇಷ್ಟೊಂದು ಕ್ಷೇತ್ರಕಾರ್ಯದ ಅನುಭವವನ್ನು ಹೊತ್ತ ಜಾನಪದ ವಿದ್ವಾಂಸರು ನಮ್ಮಲ್ಲಿ ವಿರಳ. ಜೀಶಂಪ ಅವರ ಈ ಅವಿರತ ಸೇವೆಗಾಗಿ ನಾಡಿನ ಹಲವಾರು ಸಂಘ ಸಂಸ್ಥೆಗಳು ಹಾಗೂ ಸರ್ಕಾರ ಅವರಿಗೆ ಹಲವಾರು ಪ್ರಶಸ್ತಿ ಸನ್ಮಾನಗಳನ್ನು ನೀಡಿ ಗೌರವಿಸಿದೆ. ಜೀಶಂಪ ಅವರ ವ್ಯಕ್ತಿತ್ವ ಮತ್ತು ಕೃತಿಗಳ ಮಹತ್ವವನ್ನು ಇಂದಿನ ತಲೆಮಾರಿಗೆ ಪರಿಚಯಿಸುವ ಉದ್ದೇಶದಿಂದ 'ಕುವೆಂಪು ಅಧ್ಯಯನ ಕೇಂದ್ರ' ಬೆಂಗಳೂರು ಇವರು ೧೯೮೬ರಲ್ಲಿ ಹೆಚ್. ಆರ್. ದಾಸೇಗೌಡ ಅವರು ಸಂಪಾದಿಸಿದ 'ಜೀಶಂಪ ಜಾನಪದ ಸಾಹಿತ್ಯ' ಎಂಬ ಸಂಕಿರಣಮಾಲೆ ಗ್ರಂಥವನ್ನು ಪ್ರಕಟಿಸಿದೆ.

೧೯೯೦ರಲ್ಲಿ ಜೀಶಂಪ ಅವರ ಮಿತ್ರರು, ಅಭಿಮಾನಿಗಳು ಡಾ|| ಡಿ.ಕೆ. ರಾಜೇಂದ್ರ ಮತ್ತು ನೀ. ಗಿರಿಗೌಡ ಅವರುಗಳ ಸಂಪಾದಕತ್ವದಲ್ಲಿ "ಜಾನಪದ ಸಂಭಾವನೆ" ಎಂಬ ಜೀಶಂಪ ಅಭಿನಂದನ ಗ್ರಂಥವನ್ನು ಪ್ರಕಟಿಸಿದ್ದಾರೆ. ಜೀಶಂಪ ಅವರು ಜಾನಪದ ಕ್ಷೇತ್ರಕ್ಕೆ ಸಲ್ಲಿಸಿದ ಅವಿರತ ಸೇವೆಯನ್ನು ಸ್ಮರಿಸಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಬೆಂಗಳೂರು ಇವರು ಡಾ|| ಹೆಚ್. ಜೆ. ಲಕ್ಕಪ್ಪಗೌಡ ಅವರ ಸಂಪಾದಕತ್ವದಲ್ಲಿ "ಜೀಶಂಪ ಸಂಸ್ಮರಣೆ" ಎಂಬ ಸ್ಮರಣ ಗ್ರಂಥವನ್ನು ಜೀಶಂಪ ಅವರಿಗೆ ಅರ್ಪಿಸಿದ್ದಾರೆ. ಜಾನಪದ ಕ್ಷೇತ್ರದಲ್ಲಿ ಇಷ್ಟೆಲ್ಲ ಸೇವೆ ಸಲ್ಲಿಸಿ ನಾಡಿನ ಜನತೆಯ ಗೌರವಕ್ಕೆ ಪಾತ್ರರಾದ ಇವರು "ಕರ್ನಾಟಕ ಜಾನಪದ ಜಗತ್ತಿನ ಧ್ರುವತಾರೆ"ಯೇ ಸರಿ.

❋

ಜೀಶಂಪ ಅವರ ಸಾಹಿತ್ಯ ಹಾಗೂ ಜಾನಪದ ಕೃತಿಗಳು

ಅ. ಸಾಹಿತ್ಯ

೧. ದಿಬ್ಬದಾಚೆ.

೨. ಕಾವಲುಗಾರ

೩. ಜೀವನ ಗೀತ

೪. ಸೋಲು ತಂದ ಸ್ವಯಂವರ

೫. ನಾಡಿನ ಕರೆ

೬. ಮಬ್ಬುಜಾರಿದ ಕಣಿವೆಯಲ್ಲಿ

೭. ಉಕ್ಕಿನ ಮನುಷ್ಯ

೮. ಮೇದರ ಕಲ್ಲು

೯. ಸಿಡಿಲ ಮರಿಗಳು

೧೦. ಮುದ್ದು ಪದ್ದು

೧೧. ಕಲಾ ಸಾಧಕ

೧೨. ಸಾಹಸ ಯಾತ್ರಿ

೧೩. ಬೆಳುಗೊಳದ ಗೊಮ್ಮಟೇಶ

೧೪. ಚಂದ್ರಶೇಖರ ನಾಥರು

೧೫. ಇಂಗ್ಲೆಂಡಿನಿಂದ ಫಿನ್‌ಲೆಂಡಿನವರೆಗೆ

೧೬. ೧೯೮೭ರ ಪ್ರಬಂಧಗಳು

ಆ. ಸಂಪಾದಿತ - ಇತರರೊಡನೆ

೧೭. ದಾರಿದೀಪ (ಮಕ್ಕಳ ಪ್ರಬಂಧಗಳು)

೧೮. ಹೊನ್ನ ಬಿತ್ತೇವು ಹೊಲಕೆಲ್ಲ (ಜಾನಪದ ಪ್ರಬಂಧಗಳು)

೧೯. ರತ್ನಕೋಶ (ಕನ್ನಡ-ಕನ್ನಡ ಅರ್ಥಕೊಶ)

೨೦. ಕುಲಪತಿಯ ಸಾಧನೆಗಳು

೨೧. ಕುವೆಂಪು ಗದ್ಯ ಸಂಚಯ

ಇ. ಸಂಪಾದಿತ - ಗೌರವ ಗ್ರಂಥಗಳು

೨೨. ಸಾಹಿತ್ಯ ಸಮೀಕ್ಷೆ (ತೀ.ನಂ.ಶ್ರೀ. ಗೌರವಗ್ರಂಥ)

೨೩. ಜ್ಞಾನೋಪಾಸಕ (ಡಿ.ಎಲ್.ಎನ್. ಗೌರವ ಗ್ರಂಥ)

೨೪. ಸಹ್ಯಾದ್ರಿ (ಕುವೆಂಪು ಗೌರವ ಗ್ರಂಥ)

೨೫. ಅಂತಃಕರಣ (ದೇಜಗೌ ಗೌರವ ಗ್ರಂಥ)

೨೬. ನಾಗವಲ್ಲಿ (ಹೆಚ.ಎಲ್.ಎನ್.ಗೌರವ ಗ್ರಂಥ)

೨೭. ಕಬ್ಬಿನಹಾಲು (ಕೆ.ವಿ. ಶಂಕರಗೌಡ ಗೌರವ ಗ್ರಂಥ)

೨೮. ಪರೋಪಕಾರಿ (ಗುಜ್ಜೇಗೌಡ ಗೌರವ ಗ್ರಂಥ)

ಈ. ಸಂಪಾದಿತ - ಸಂಕೀರ್ಣ

೨೯. ಇಕ್ಷುಗಂಗಾ (ಸಾಹಿತ್ಯಿಕ, ಚಾರಿತ್ರಿಕ ಪ್ರಬಂಧಗಳು)

೩೦. ಸಾಧನೆ (ಸಾಹಿತ್ಯಿಕ ಪ್ರಬಂಧಗಳು)

೩೧. ಲೋಕಪಾವನಿ (ಮಂಡ್ಯಜಿಲ್ಲೆಯ ವಿವಿಧ ಮುಖಗಳನ್ನೊಳಗೊಂಡ ಪ್ರಬಂಧಗಳು)

ಉ. ಸಂಪಾದಿತ ಸಾಹಿತ್ಯಿಕ ಪತ್ರಿಕೆಗಳು

೩೨. ಕನಕ ಕಿರಣ

೩೩. ಮಧುಕರ

೩೪. ಪ್ರಸಾದ

೩೫. ಪರಂಪರೆ

ಊ. ಸಂಪಾದಿತ ಜಾನಪದ ಪತ್ರಿಕೆಗಳು

೩೬. ಜಾನಪದ

೩೭. ಮೂಡಲಪಾಯ

೩೮ .ಜಾನಪದ ವಾರ್ತಾಪತ್ರಿಕೆ

ಋ. ಜಾನಪದ ಗ್ರಂಥಾವಳಿ; ಸಂಶೋಧನ ಕೃತಿಗಳು

೩೯. ದಕ್ಷಿಣ ಕರ್ನಾಟಕದ ಜನಪದ ಕಾವ್ಯ ಪ್ರಕಾರಗಳು (ಪಿ.ಎಚ್.ಡಿ.ಮಹಾಪ್ರಬಂಧ)

೪೦. ಜನಪದ ಸಾಹಿತ್ಯ ಸಮೀಕ್ಷೆ

೪೧. ಜಾನಪದ ಕೆಲವು ಮುಖಗಳು

೪೨. ನಮ್ಮ ಜನಪದ ಸಾಹಿತ್ಯ

೪೩. ಜಾನಪದ

೪೪. ಜಾನಪದ ಸಂಗಮ

೪೫. ಗಂಡಸರ ಜನಪದ ಗೀತೆಗಳು

೪೬. ಹೆಂಗಸರ ಜನಪದ ಗೀತೆಗಳು

೪೭. ಕರ್ನಾಟಕ ಜನಪದ ವಾದ್ಯಗಳು

೪೮. ಕಂಸಾಳೆಯವರು

೪೯. ಮಂಟೇಸ್ವಾಮಿ ನೀಲಗಾರರು

೫೦. ಮೈಲಾರನ ಗೊರವರು

೫೧. ದೊಂಬಿದಾಸರು

೫೨. ಕಿನ್ನರಿ ಜೋಗಿಗಳು

೫೩. ಸೂತ್ರದ ಗೊಂಬೆಯಾಟ

೫೪. ಜನಪದ ಅಡುಗೆಗಳು

೫೫. ಮೂಡಲಪಾಯ

೫೬. ಜನಪದ ಕಲಾವಿಹಾರ

೫೭. ಜಾನಪದ ಒಂದು ಅಧ್ಯಯನ

೫೮. ನಮ್ಮ ಜನಪದ ಕಲೆಗಳು

೫೯. ಜಾನಪದ ಸಿರಿ

೬೦. ತಮಿಳುನಾಡಿನ ಜಾನಪದ (ಅನುವಾದಿತ)

ಋೂ. ಜಾನಪದ ಸಂಗ್ರಹಗಳು

೬೧. ಕರ್ನಾಟಕ ವೃತ್ತಿಗಾಯಕ ಕಾವ್ಯಗಳು

೬೨. ದೊಂಬಿದಾಸರ ಲಾವಣಿಗಳು

೬೩. ಹೆಳವರ ಕಾವ್ಯಗಳು

೬೪. ಕನ್ನಡ ಜನಪದ ಕಥೆಗಳು

೬೫. ಜನಪದ ಕಾವ್ಯ ಕಥೆಗಳು

೬೬. ಅವರ ನೆನೆದೇವು

೬೭. ಜನಪದ ಖಂಡಕಾವ್ಯಗಳು

೬೮. ಜನಪದ ವೀರಕಾವ್ಯಗಳು

೬೯. ಎರಡು ಜನಪದ ಕಾವ್ಯಗಳು

೭೦. ಮಂಟೇಸ್ವಾಮಿ ಕಾವ್ಯ

೭೧. ಪಿರಿಯಾ ಪಟ್ಟಣದ ಕಾಳಗ

೭೨. ಭಾಗವಂತಿಕೆ ಮೇಳ

೭೩. ಮುಡುಕುತೊರೆ ಮಲ್ಲಿಕಾರ್ಜುನ.

ಡಾ. ಜೀಶಂಪರವರ ಬದುಕಿನ ಪ್ರಮುಖ ಘಟನೆಗಳು

೧೯೩೩	:	ಜನನ, ಅಂಬಲ ಜೀರಹಳ್ಳಿ, ನಾಗಮಂಗಲ ತಾಲ್ಲೋಕು
೧೯೫೧	:	ಎಸ್.ಎಸ್.ಎಲ್.ಸಿ.ತೇರ್ಗಡೆ (ಪ್ರಥಮ ದರ್ಜೆಯಲ್ಲಿ)
೧೯೬೩	:	ಎಂ.ಎ. ಪದವಿ (ಕನ್ನಡ)
೧೯೬೪	:	ವಿವಾಹ
೧೯೬೪	:	ಕನ್ನಡ ಅಧ್ಯಾಪಕರು ಜೆ.ಎಸ್.ಎಸ್. ಕಾಲೇಜು. ಮೈಸೂರು
೧೯೬೮	:	ಕನ್ನಡ ಅಧ್ಯಾಪಕ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು.
೧೯೭೧	:	ಡಾಕ್ಟರೇಟ್ ಪದವಿ (ಜಾನಪದ)
೧೯೭೨	:	ರೀಡರ್, ಕನ್ನಡ
೧೯೭೨	:	ಕುಲಪತಿಗಳ ಆಪ್ತ ಕಾರ್ಯದರ್ಶಿ, ವಿದೇಶೀ ವಿದ್ಯಾರ್ಥಿಗಳ ಸಲಹೆಗಾರ
೧೯೭೪	:	ಜಾನಪದ ಪ್ರಾಧ್ಯಾಪಕ
೧೯೭೭	:	ಸಾಹಿತ್ಯ ಪರಿಷತ್ತಿನ ವಜ್ರಮಹೋತ್ಸವ ಪ್ರಶಸ್ತಿ
೧೯೭೯	:	ವಿದೇಶ ಪ್ರವಾಸ ಇಂಗ್ಲೆಂಡ, ಸ್ಕಾಟಲೆಂಡ, ಫ್ರಾನ್ಸ್, ಜರ್ಮನಿ, ಡೆನ್ಮಾರ್ಕ್,ಸ್ವೀಡನ್, ಫಿನ್ಲೆಂಡ್, ಜಕೋಸ್ಲೋವಾಕಿಯಾ,
೧೯೮೧	:	ಸದಸ್ಯರು. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ
೧೯೮೨	:	ವಿದೇಶ ಪ್ರವಾಸ - ಅಮೆರಿಕಾ
೧೯೮೭	:	ರಾಷ್ಟ್ರೀಯ ಅಧ್ಯಾಪಕ
೧೯೮೭	:	ಅಧ್ಯಕ್ಷ, ೧೩ನೇ ಅಖಿಲ ಕರ್ನಾಟಕ ಜಾನಪದ ಸಮ್ಮೇಳನ: ಕರ್ನಾಟಕ ವಿಶ್ವವಿದ್ಯಾಲಯ

೧೯೮೭ : ರಾಜ್ಯ ಪ್ರಶಸ್ತಿ

೧೯೮೭ : ನಿರ್ದೇಶಕ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು

೧೯೮೯ : ವಿದೇಶ ಪ್ರವಾಸ : ಟರ್ಕಿ, ಟ್ಯುನೀಷಿಯ, ಸೈಪ್ರಸ, ಮಾಲ್ಟ

೧೯೯೧ : ಅಧ್ಯಕ್ಷರು, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ

೧೯೯೨ : ಅಧ್ಯಕ್ಷರು ಅಂತರ್ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ, ತೊಣ್ಣೂರು ಪಾಂಡವ ಪುರ ತಾಲ್ಲೋಕು

೧೯೯೩ : ಫಿನ್ನಿಷ್ ಫೋಕ್ಲೋರ್ ಸೊಸೈಟಿಯ್ಯಲ್ಲಿ ಗೌರವ ಸದಸ್ಯತ್ವಕ್ಕೆ ಆಯ್ಕೆ.

೧೭.೬.೧೯೯೫ : ನಿಧನ.

❄

ಪರಾಮರ್ಶನ ಗ್ರಂಥಗಳು

೧. ‘ಜೀಶಂಪ ಜಾನಪದ ಸಾಹಿತ್ಯ” ಸಂಪಾದಕರು : ಹೆಚ್. ಆರ್. ದಾಸೇಗೌಡ ಕುವೆಂಪು ಅಧ್ಯಯನ ಕೇಂದ್ರ, ಬೆಂಗಳೂರು ೧೯೮೬.

೨. “ಜಾನಪದ ಸಂಭಾವನೆ” (ಜಾನಪದ ಅಭಿನಂದನ ಗ್ರಂಥ) ಸಂಪಾದಕರು : ಡಾ|| ಡಿ.ಕೆ. ರಾಜೇಂದ್ರ ನೀ. ಗಿರೀಗೌಡ ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ ಮೈಸೂರು, ೧೯೯೧.

೩. “ಜೀಶಂಪ ಸಂಸ್ಮರಣೆ” ಸಂ. ಡಾ|| ಹೆಚ್. ಜೆ. ಲಕ್ಕಪ್ಪಗೌಡ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು, ೧೯೯೫.

೪. ಜೀಶಂಪ ಅವರ ಪ್ರಕಟಿತ ಕೃತಿಗಳು.

❄

ಹಂಪಿಯ ಕನ್ನಡ ವಿಶ್ವವಿದ್ಯಾಲಯ ವಿದ್ಯೆಯನ್ನು ಕಲಿಯಲು ಅನುವು ಮಾಡಿಕೊಡುವ ಒಂದು ಸಂಸ್ಥೆಯೇ ಹೊರತು ಅದು ವಿದ್ಯೆಯನ್ನು ಕಲಿಸುವ ಸಂಸ್ಥೆಯಲ್ಲ. ನಮ್ಮ ನಾಡಿನಲ್ಲಿ ಹಳೆಯ ಕಾಲದ ತಿಳುವಳಿಕೆಯೊಂದಿದೆ. ಅಲ್ಲದೆ ಪಶ್ಚಿಮದಿಂದ ಹರಿದು ಬರುತ್ತಿರುವ ಜ್ಞಾನ ಪ್ರವಾಹವೂ ಇದೆ. ಈ ಎರಡೂ ತಿಳುವಳಿಕೆಗಳು ಒಂದಕ್ಕೊಂದು ಸಂಧಿಸಿ ಬೆಳಕನ್ನು ಉಂಟುಮಾಡಿವೆ. ಜೊತೆಗೆ ದಿಗ್ಭ್ರಮೆಯನ್ನೂ ತಂದಿವೆ. ಈ ತಿಳುವಳಿಕೆಗಳ ವಿವೇಕದ ವಿನಿಯೋಗ ಇಂದು ಅಗತ್ಯವಾಗಿದೆ. ಇಂಥ ವಿನಿಯೋಗಕ್ಕಾಗಿ ಹೊಸ ಬಗೆಯ ಶಾಸ್ತ್ರ ವಿಧಾನಗಳು ನಮಗಿಂದು ಬೇಕಾಗಿವೆ. ಕನ್ನಡ ವಿಶ್ವವಿದ್ಯಾಲಯದಲ್ಲಿ ನಡೆಯುತ್ತಿರುವ ಸಂಶೋಧನೆಯ ಗುರಿಯೆಂದರೆ ಈ ಶಾಸ್ತ್ರ ವಿಧಾನಗಳ ನಿರ್ಮಾಣ.

ನಾವು ನಮ್ಮ ನಮ್ಮಲ್ಲಿ ವಿಚಾರ ವಿನಿಮಯ ನಡೆಸಲು, ಒಬ್ಬರ ಅರಿವನ್ನು ಎಲ್ಲರೂ ಹಂಚಿಕೊಳ್ಳಲು ವಿಶ್ವವಿದ್ಯಾಲಯದಲ್ಲಿ ಪ್ರತಿವಾರ ಮಂಟಪ ಎಂಬ ಕಾರ್ಯಕ್ರಮ ನಡೆಸುತ್ತೇವೆ. ಅಲ್ಲಿ ಹೊಮ್ಮಿದ ವಿಚಾರಗಳು ನಮ್ಮ ಅರಿವನ್ನು ಹೆಚ್ಚಿಸಿದಂತೆ ನಿಮಗೂ ಲಾಭದಾಯಕವಾಗುವವೆಂಬ ನಂಬಿಕೆಯಿಂದ ಪುಸ್ತಿಕೆಗಳ ರೂಪದಲ್ಲಿ ಅವನ್ನು ಪ್ರಕಟಿಸಿ ನಿಮ್ಮ ಕೈಗಿಡುತ್ತಿದ್ದೇವೆ.

ಚಂದ್ರಶೇಖರ ಕಂಬಾರ
ಕುಲಪತಿಗಳು